ಸಂಪುಟ 01 | ಸಂಚಿಕೆ 215 | ಬುಧವಾರ 01 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ವೈದ್ಯರ ದಿನ: ಭಾರತದ ಖ್ಯಾತ ವೈದ್ಯ ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಡಾ. ಬಿಧನ್ ಚಂದ್ರ ರಾಯ್ ಅವರ ಜನ್ಮ ಹಾಗೂ ಪುಣ್ಯತಿಥಿಯ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ವೈದ್ಯರ ಸೇವೆ ಮತ್ತು ತ್ಯಾಗವನ್ನು ಗೌರವಿಸಲು ಈ ದಿನ ಮೀಸಲಾಗಿದೆ.

2) ಸಿಎ (CA) ದಿನ: ಭಾರತದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) 1949ರಲ್ಲಿ ಸ್ಥಾಪನೆಯಾದ ದಿನದ ನೆನಪಿಗಾಗಿ ಚಾರ್ಟರ್ಡ್ ಅಕೌಂಟೆಂಟ್ಸ್ ದಿನವನ್ನು ಆಚರಿಸಲಾಗುತ್ತದೆ.

3) ಕನ್ನಡ ಪತ್ರಿಕೋದ್ಯಮ ದಿನ
ಕನ್ನಡದ ಮೊದಲ ಪತ್ರಿಕೆಯಾದ 'ಮಂಗಳೂರು ಸಮಾಚಾರ'ವು ಜುಲೈ 1, 1843ರಂದು ಪ್ರಕಟಗೊಂಡಿತು. ಇದನ್ನು ಕರ್ನಾಟಕದಲ್ಲಿ ಕನ್ನಡ ಪತ್ರಿಕೋದ್ಯಮ ದಿನವಾಗಿ ಸ್ಮರಿಸಲಾಗುತ್ತದೆ.

4) ಜಿಎಸ್‌ಟಿ (GST) ದಿನ
ಭಾರತದಲ್ಲಿ ಸರಕು ಮತ್ತು ಸೇವಾ ತೆರಿಗೆಯು (GST) ಜುಲೈ 1, 2017 ರಂದು ಜಾರಿಗೆ ಬಂದಿತು.

## ಸುಭಾಷಿತ

ಜೀವನಾವಧಿ ಅಲ್ಪ, ಪ್ರಾಪಂಚಿಕ ವಿಷಯಗಳೆಲ್ಲ ಕ್ಷಣಿಕ. ಆದರೆ ಯಾರು ಇತರರಿಗಾಗಿ ಬಾಳುತ್ತಾರೋ ಅವರೇ ನಿಜವಾಗಿ ಬಾಳುತ್ತಾರೆ. ಉಳಿದವರು ಜೀವನ್ಮತರು.

-- ಸ್ವಾಮಿ ವಿವೇಕಾನಂದ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ರಸ್ತೆಗುಂಡಿ ಮುಚ್ಚಲು 8825 ಕೋಟಿ ರೂ.ಬಳಕೆ ಕುರಿತು
# ಉನ್ನತಮಟ್ಟದ ತನಿಖೆಗೆ ಎನ್‌ಆರ್‌ಆರ್ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿ ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಒಟ್ಟು 8,825.11 ಕೋಟಿ ರೂ. ಅನುದಾನ ಬಿಡುಗಡೆ ಯಾಗಿದ್ದರೂ, ನಗರದ ರಸ್ತೆಗಳ ದುಸ್ಥಿತಿ ಮುಂದುವರಿದಿರುವ ಹಿನ್ನೆಲೆಯಲ್ಲಿ ಈ ಹಣದ ಬಳಕೆಯ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ 8,230.52 ಕೋಟಿ ಹಾಗೂ ರಸ್ತೆ ಗುಂಡಿ ಗಳನ್ನು ಮುಚ್ಚಲು 594.58 ಕೋಟಿ ಸೇರಿದಂತೆ ಒಟ್ಟು 8,825.11 ಕೋಟಿ ವೆಚ್ಚಕ್ಕೆ ಅನುದಾನ ಬಿಡುಗಡೆ ಮಾಡ ಲಾಗಿದೆ. ಇಷ್ಟೊಂದು ದೊಡ್ಡ ಮೊತ್ತ ಖರ್ಚಾಗಿದ್ದರೆ ನಗರದ ರಸ್ತೆಗಳು ಕನಿಷ್ಠ ಹತ್ತು ವರ್ಷ ಬಾಳಿಕೆ ಬರುವಂತೆ ನಿರ್ಮಾಣವಾಗಬೇಕಿತ್ತು. ಆದ-



ರೆ ವಾಸ್ತವದಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಿದ ರಸ್ತೆಗಳೂ ಕೆಲವೇ ತಿಂಗಳಲ್ಲಿ ಹಾಳಾಗುತ್ತಿವೆ ಎಂದು ಅವರು ಆರೋಪಿಸಿದ್ದಾರೆ.

ಕಾಮಗಾರಿಗಳ ಟೆಂಡರ್ ಅನುಮೋದನೆಯಿಂದ ಹಿಡಿದು ಬಿಲ್ ಪಾವತಿವರೆಗಿನ ವಿವಿಧ ಹಂತಗಳಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಕಮಿಷನ್ ನೀಡುವ ಭ್ರಷ್ಟ ವ್ಯವಸ್ಥೆ ಇದೆ ಎಂದು ರಮೇಶ್ ಎನ್.ಆರ್. ಆರೋಪಿಸಿದ್ದಾರೆ.

ಇದರಿಂದ ಗುತ್ತಿಗೆದಾರರು ಕಡಿಮೆ ಗುಣಮಟ್ಟದ ಸಾಮಗ್ರಿಗಳನ್ನು ಬಳಸುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಕಾಮಗಾರಿಗಳ ಗುಣಮಟ್ಟ ಕುಸಿದಿದೆ ಎಂದು ತಿಳಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳ ಸಭೆಗಳಲ್ಲಿ ಕಳಪೆ ಕಾಮಗಾರಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸಿರುವ ಅವರು, ಈಗ ಆ ಹೇಳಿಕೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ಬಳಕೆ ಕುರಿತು ಉನ್ನತ ಮಟ್ಟದ ಪಾರದರ್ಶಕ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಸಂಬಂಧ 1,049 ಪುಟಗಳ ದಾಖಲೆಗಳೊಂದಿಗೆ ಸಚಿವರಿಗೆ ಮನವಿ ಸಲ್ಲಿಸಿರುವುದಾಗಿ ರಮೇಶ್ ತಿಳಿಸಿದ್ದಾರೆ. ಅಲ್ಲದೆ, ಜಿಬಿಎ ಹಾಗೂ ಐದು ನಗರ ಪಾಲಿಕೆಗಳಲ್ಲಿ ಪಾರದರ್ಶಕ ಆಡಳಿತ ಜಾರಿಗೆ ತಂದು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದಾರೆ.ನಗರದ ಪ್ರಮುಖ ರಸ್ತೆಗಳಲ್ಲಿ ಇನ್ನೂ ರಸ್ತೆ ಗುಂಡಿಗಳ ಸಮಸ್ಯೆ ಮುಂದುವರಿದಿರುವ ಕಾರಣವನ್ನು ಸಮಗ್ರ ತನಿಖೆ ಮೂಲಕ ಬಹಿರಂಗಪಡಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ರಮೇಶ್ ಒತ್ತಾಯಿಸಿದ್ದಾರೆ.

## ಜಾಲಹಳ್ಳಿ ಸಮೀಪ ಕರಡಿಗುಡ್ಡ ಸೀಮೆಯಲ್ಲಿ ಹೊಸ 63 ಕೆ.ವಿ. ಟಿ.ಸಿ ಅಳವಡಿಕೆಗೆ ರೈತರ ಮನವಿ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಕರಡಿಗುಡ್ಡ ಸೀಮೆಯ ರೈತರು ತಮ್ಮ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಕಲ್ಪಿಸುವ ಉದ್ದೇಶದಿಂದ ಸರ್ವೇ ನಂಬರ್ 54ರಲ್ಲಿ ಹೊಸ 63 ಕೆ.ವಿ. ಸಾಮರ್ಥ್ಯದ ವಿದ್ಯುತ್ ಪರಿವರ್ತಕ (ಟಿ.ಸಿ.) ಅಳವಡಿಸುವಂತೆ ಮನವಿ ಸಲ್ಲಿಸಿದರು.

ದಿನಾಂಕ 29-06-2026ರಂದು ರೈತರು ದೇವದುರ್ಗದ ಜೆಸ್ಕಾಂ ಕಾರ್ಯಾಲಯಕ್ಕೆ ಭೇಟಿ ನೀಡಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಬಳಿಕ ಕ್ಷೇತ್ರದ ಶಾಸಕರಾದ ಶ್ರೀಮತಿ ಕರೇಮ್ಮ ಜಿ. ನಾಯಕ್ ಅವರ ಕಚೇರಿಗೂ ಭೇಟಿ ನೀಡಿ ಇದೇ ಕುರಿತು ಮನವಿ ಪತ್ರ ನೀಡಿದರು.



ಮನವಿಯಲ್ಲಿ ತಿಳಿಸಿರುವಂತೆ, ಕರಡಿಗುಡ್ಡ ಸೀಮೆಯ ಸರ್ವೇ ನಂಬರ್ 54, 56 ಹಾಗೂ 87ರ ವ್ಯಾಪ್ತಿಯ ಸುಮಾರು 20ಕ್ಕೂ ಹೆಚ್ಚು ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಇದ್ದರೂ, ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದ ಕಾರಣ ರೈತರು ಬೆಳೆಗಳಿಗೆ ನೀರುಣಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸರ್ವೇ ನಂಬರ್ 54ರಲ್ಲಿ ಹೊಸ 63 ಕೆ.ವಿ. ಸಾಮರ್ಥ್ಯದ ಟಿ.ಸಿ. ಮಂಜೂರು ಮಾಡಿ ಶೀಘ್ರವೇ ಅಳವಡಿಸುವಂತೆ ರೈತರು ಕೋರಿದ್ದಾರೆ. ಇದರಿಂದ ಜಾಲಹಳ್ಳಿ ಹಾಗೂ ಕರಡಿಗುಡ್ಡ ಸೀಮೆಯ ಅನೇಕ ರೈತರಿಗೆ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶಿವಮನ್ನಪ್ಪ ಹಟ್ಟಿ, ಸಾಬಣ್ಣ ತಂದೆ ಗಂಗಪ್ಪ, ಹುಸೇನ್ ಬಾಷಾ ತಂದೆ ಫತಿಂಸಾಬ್ ಆರ್ತಿ, ಹುಚ್ಚಪ್ಪ ತಂದೆ ಸಿದ್ದಪ್ಪ, ರಾಮಣ್ಣ ತಂದೆ ಶಿವಪ್ಪ, ದುರ್ಗಪ್ಪ ತಂದೆ ಪರಸಪ್ಪ, ಯಂಕಪ್ಪ ತಂದೆ ಬುಡ್ಡಪ್ಪ, ಜಮೀಲ್ ತಂದೆ ಬಾಬುಸಾಬ್ ಪರಾಶಿ, ಮೈಬೂಬ್ ಪರಾಶಿ, ಮುಸ್ತಫ ಯಾದಗಿರಿ, ಎಲ್ಲಪ್ಪ ತಂದೆ ಚಂದಪ್ಪ ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.

## ಗೌರಂಪೇಟೆ ಉರ್ದು ಕಿರಿಯ ಪ್ರಾಥಮಿಕ ಶಾಲೆಗೆ ನೂತನ SDMC ಅಧ್ಯಕ್ಷರಾಗಿ ಬಾಬು ಬುವಾಜಿ ಅವಿರೋಧ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಗೌರಂಪೇಟೆ, ಜೂನ್ 29: ಗೌರಂಪೇಟೆ ಉರ್ದು ಕಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯ *ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಖಆಒಅ)*ಯ ನೂತನ ಅಧ್ಯಕ್ಷರಾಗಿ ಬಾಬು ಬುವಾಜಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಎಂ.ಡಿ. ಇಸ್ಮಾಯಿಲ್ ಅವರು ಉಪಸ್ಥಿತರಿದ್ದು, ನೂತನ ಅಧ್ಯಕ್ಷರಿಗೆ ಶುಭಾಶಯಗಳನ್ನು ಕೋರಿದರು. ಸಭೆಯಲ್ಲಿ ಎಸ್‌ಡಿಎಂಸಿ ಸದಸ್ಯರು, ಊರಿನ ಗಣ್ಯರು, ಮಕ್ಕಳ ಪಾಲಕರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.



ನೂತನ ಅಧ್ಯಕ್ಷರಾದ ಬಾಬು ಬುವಾಜಿ ಅವರು ಶಾಲೆಯ ಶೈಕ್ಷಣಿಕ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಲ್ಲರ ಸಹಕಾರದೊಂದಿಗೆ ಉತ್ತಮ ಕಾರ್ಯಗಳನ್ನು ಕೈಗೊಳ್ಳುವುದಾಗೀ ತಿಳಿಸಿದರು

ಇದೇ ಸಂದರ್ಭದಲ್ಲಿ ಇದೇ ಸಂದರ್ಭದಲ್ಲಿ ಅತಿಥಿಗಳಾಗಿ ಭಾಗವಹಿಸಿದ ಅಮೀನ ಬಾಷ ಪಿರಸಾಬ ಖಾಜಾ ಪಾಷ ಟಜ ರಫಿ ಬೂವಾಜಿ ಅಮಿರ್ ಪಾಷ ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## "ಅಗ್ನಿವೀರ ಯೋಧ ಅಯ್ಯನಗೌಡ ಪಂಪಾಪತಿಗೆ ಗ್ರಾಮಸ್ಥರಿಂದ ಸನ್ಮಾನ"


❑ ನೈಜ್ಯ ದೆಸೆ ನ್ಯೂಸ್

ಕವಿತಾಳ ಸಮೀಪದ ಅಮೀನಗಡ ನಿವಾಸಿ ಅಗ್ನಿವೀರ ತರಬೇತಿ ಪಡೆದು ಬಂದ ಅಯ್ಯನಗೌಡ ಅವರನ್ನು ಸೋಮವಾರ ಸನ್ಮಾನಿಸಲಾಯಿತು.

ಕವಿತಾಳ: ತರಬೇತಿ ಪಡೆದು ಅಮೀನಗಡಕ್ಕೆ ಸೋಮವಾರ ಆಗಮಿಸಿದ ಅಗ್ನಿವೀರ ಅಯ್ಯನಗೌಡ ಪಂಪಾಪತಿ ಅವರನ್ನು ಗ್ರಾಮಸ್ಥರ ವತಿಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಭಾರತೀಯ ಸೇನೆ ಲಡಾಖ್‌ಗೆ ಆಯ್ಕೆಯಾಗಿದ್ದ ಅಯ್ಯನಗೌಡ ಬೆಂಗಳೂರಿನಲ್ಲಿ 6 ತಿಂಗಳ ಅಗ್ನಿವೀರ ತರಬೇತಿ ಪಡೆದು ಆಗಮಿಸಿದ ಹಿನ್ನೆಲೆಯಲ್ಲಿ ಯೋಧನ ಸಾಧನೆಯ ನೆನಪಿಗಾಗಿ ಪ್ರೌಢಶಾಲೆ ಆವರಣದಲ್ಲಿ ಯೋಧನ ಹೆಸರಿನಲ್ಲಿ ಸಸಿ ನೆಡಲಾಯಿತು.

ಮುಖ್ಯ ಶಿಕ್ಷಕ ರಾಯನಗೌಡ



ಮಾತನಾಡಿ, 'ಗ್ರಾಮೀಣ ಭಾಗದ ಯುವಕ ಅಯ್ಯನಗೌಡ ಅವರು ಅಗ್ನಿವೀರ ತರಬೇತಿ ಯಶಸ್ವಿಯಾಗಿ ಪೂರ್ಣಗೊಳಿಸಿರುವುದು ಪ್ರಶಂಸನೀಯ. ಮಕ್ಕಳು ಅವರಿಂದ ಸ್ಫೂರ್ತಿ ಪಡೆಯಲಿ ಎಂಬ ಉದ್ದೇಶದಿಂದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು' ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಅಬ್ದುಲ್ ಹಮೀದ್, ಮುಖಂಡರಾದ ಮಂಜೂರ ಪಾಷಾ, ಈರಣ್ಣ, ಶಿಕ್ಷಕರಾದ ಶೇಖಹುಸೇನ್, ಅಮರೇಗೌಡ, ಬಸಲಿಂಗಪ್ಪ, ವಿಜಯಲಕ್ಷ್ಮಿ ಮತ್ತು ಲಕ್ಷ್ಮಿ ಉಪಸ್ಥಿತರಿದ್ದರು.

## ಬಾಲಕಿಯರ ಮೇಲೆ ದೌರ್ಜನ್ಯ ಎಸಗಿದ ಅತ್ಯಾಚಾರಿಗೆ ಗಲ್ಲಿಗೇರಿಸಿ: ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಹೋದರಿಯರಿಬ್ಬರ ಸಂತ್ರಸ್ತ ಕುಟುಂಬವು ಅತ್ಯಂತ ಬಡ ದಲಿತ ಕುಟುಂಬ ಖಾಸಗಿಯವರ ಜಾಗದಲ್ಲಿ ಶೆಡ್ ಹಾಕಿಕೊಂಡು ಮಳೆ, ಚಳಿ, ಬಿಸಿಲೆನ್ನದೇ ಹಲವು ವರ್ಷಗಳಿಂದ ಅಲ್ಲಿಯೇ ವಾಸಮಾಡುತ್ತಿದ್ದು, ಪೋಷಕರು ಕೂಲಿ ಕೆಲಸಕ್ಕಾಗಿ ಹೊರಗೆ ಹೋದ ವೇಳೆ ಹರಕು-ಮುರುಕು ತಗಡಿನ ಶೆಡ್ ಗೆ ನುಗ್ಗುತ್ತಿದ್ದ ದುಷ್ಕರ್ಮಿ ಮೂರ್ನಾಲ್ಕು ದಿನಗಳಿಂದ ಸಹೋದರಿಯರಿಬ್ಬರಿಗೆ ಹೆದರಿಸಿ, ಬೆದರಿಸಿ, ಅತ್ಯಾಚಾರ ನಡೆಸಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಈ ಘಟನೆಯಿಂದ ಸಂತ್ರಸ್ತ ಬಾಲಕಿಯರು ಮತ್ತು ಅವರ ಪೋಷಕರು ಭಯಭೀತರಾಗಿದ್ದು, ಅಲ್ಲದೆ ಮಾನಸಿಕವಾಗಿ ಜರ್ಜರಿತರಾಗಿದ್ದಾರೆ. ಈ ದುರ್ಘಟನೆಯಿಂದ ಆ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂದು ಸರಸ್ವತಿ ಪಾಟೀಲ್ ಮಾತನಾಡಿದರು. ನಗರದ ತಹಶೀಲ್ದಾರ್ ಕಚೇರಿಯಲ್ಲಿ ಪ್ರಗತಿಪರ



ಸಂಘಟನೆಗಳ ಮುಖಂಡರು ಹಾಗೂ ವಿವಿಧ ಕಾಲೇಜು ವಿದ್ಯಾರ್ಥಿಗಳು ಆಗಮಿಸಿ ಬೃಹತ್ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಸರ್ಕಾರದ ಮುಖ್ಯಮಂತ್ರಿಗಳಿಗೆ ಹಾಗೂ ಗೃಹಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಶಕುಂತಲಾ ಪಾಟೀಲ್ ಮಾತನಾಡಿ, ಬಡವರು ಮಧ್ಯಮ ವರ್ಗದವರು ತಮ್ಮ ಹೊಟ್ಟೆಪಾಡಿಗಾಗಿ ಕುಟುಂಬದ ನಿರ್ವಹಣೆಗಾಗಿ ಕೂಲಿ ಕೆಲಸಕ್ಕೆ ಹೋಗುವುದು ಅನಿವಾರ್ಯ ಶಾಲೆಗೆ ಹೋಗಿ ಬರುವ ಮಕ್ಕಳು ಪಾಲಕರು ಬರುವವರೆಗೂ ಒಂಟಿಯಾಗಿ ಇರಬೇಕಾದ ಅನಿವಾರ್ಯವಾಗಿರುತ್ತದೆ. ಇದನ್ನು ದುರುಪಯೋಗ ಪಡಿಸಿಕೊಂಡ ಮೃಗ ಮನಸ್ಸಿನ ವ್ಯಕ್ತಿಯನ್ನು ಗಲ್ಲಿಗೇರಿಸಬೇಕು ಇದರಿಂದ ಮುಂದೆ ಇಂತಹ ಪೈಶಾಚಿಕ ಕೃತ್ಯವನ್ನು ಮಾಡುವವರಿಗೆ ಒಂದು ಪಾಠವಾಗುತ್ತದೆ ಎಂದರು.

ಸಾಮಾಜಿಕ ಹೋರಾಟಗಾರರು ಹಾಗೂ ಹಿರಿಯ ಮುಖಂಡರಾದ ಚಂದ್ರಶೇಖರ ಗೋರೇಬಾಳ ಅವರು ಮಾತನಾಡಿ, ಮಹಿಳೆಯರ ಮೇಲೆ ನಿತ್ಯ ನಿರಂತರವಾಗಿ ಕಿರಕುಳ, ದೌರ್ಜನ್ಯಗಳು, ಅತ್ಯಾಚಾರ, ಕೊಲೆಗಳು ಆಗುತ್ತಿವೆ, ಆದರೂ ಸರ್ಕಾರದಿಂದ ಯಾವುದೇ ರಕ್ಷಣೆ ಇಲ್ಲವಾಗಿದೆ. ಸಾಮಾಜಿಕ ಜಾಲತಾಣ, ಇಂಟರ್ನೆಟ್ ನಲ್ಲಿ ಎಗ್ಗಿಲ್ಲದೇ ಅಶ್ಲೀಲ ದೃಶ್ಯಗಳ ವಿಡಿಯೋಗಳು ಸೇರಿದಂತೆ ಮುಂತಾದ ಪ್ರಚೋನಾದತ್ಮಕ ಕೃತ್ಯಗಳ ಮೇಲೆ ಸರ್ಕಾರದ ಯಾವುದೇ ಕಡಿವಾಣ ಇಲ್ಲವಾಗಿದ್ದು ಡ್ರಗ್ಸ್, ಗಾಂಜಾ, ಮಾದಕ ವಸ್ತುಗಳು ಸುಲಭವಾಗಿ ಯುವಜನಾಂಗದ ಕೈಗೆ ಸಿಗುತ್ತಿರುವುದರಿಂದ ಇಂತಹ ದುಷ್ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇವುಗಳ ಮೇಲೆ ಸರ್ಕಾರ ನಿಗಾವಹಿಸದೆ, ಹಾಗೂ ಕ್ರಮ ಕೈಗೊಳ್ಳದೆ ಇರುವುದು ಶೋಚನೀಯ ವಿಷಯವಾಗಿದೆ ಎಂದರು.

ನಂತರ ಡಿ.ಎಚ್.ಕಂಬಳಿ, ನಾಗರಾಜ ಪೂಜಾರ್, ಅಶೋಕ ಜಲದಿನ್ನಿ, ವಿಜಯಲಕ್ಷ್ಮಿ ಗುರಿಕಾರ, ಸುಮಯ್ಯ, ಸೇರಿದಂತೆ ಅನೇಕ ಮುಖಂಡರು ಮಾತನಾಡಿ, ಮುಕ್ತ ಮಾರುಕಟ್ಟೆ ಹೆಸರಿನಲ್ಲಿ ಕಾರ್ಪೋರೇಟ್ ಕಂಪನಿಗಳು ತಮ್ಮ ವಸ್ತುಗಳನ್ನು ಮಾರಾಟದ ಜೊತೆಗೆ ಜಾಹಿರಾತುಗಳಲ್ಲಿ ಮಹಿಳೆಯನ್ನೆ ಮಾರಾಟದ ವಸ್ತುವಿನಂತಾಗಿದೆ. ಇಂತಹ ಕೃತ್ಯಗಳು ಸಮಾಜದಲ್ಲಿ ಹೆಚ್ಚಾಗಲು ಪುಷ್ಟಿ ನೀಡುತ್ತಿವೆ. ಈ ಹಿನ್ನೆಲೆ ಅಪ್ರಾಪ್ತ ಬಾಲಕಿಯರ ಮೇಲೆ ನಡೆದಿರುವ ದುಷ್ಕೃತ್ಯ ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥನಿಗೆ ಸರ್ಕಾರ ಕಠಿಣ ಶಿಕ್ಷೆ ವಿಧಿಸಬೇಕು. ಮತ್ತು ಬಾಧಿತರ ಕುಟುಂಬಕ್ಕೆ ಸೂಕ್ತ ಪರಿಹಾರ, ರಕ್ಷಣೆ ನೀಡಬೇಕು ಎಂದು ಒತಾಯಿಸಿದರು.

3ನೇ ಪುಟಕ್ಕೆ

## ಸಾಹಿತ್ಯ ಸಿಂಚನ

### ವೈದ್ಯೋ ನಾರಾಯಣೋ ಹರಿಯೇ

ದೇವಸ್ಥಾನದಲ್ಲಿ ದೇವರು ಕಲ್ಲು
ಆಸ್ಪತ್ರೆಯಲ್ಲಿ ದೇವರು ನಡೆಯುತ್ತಾನೆ
ಸ್ಟೆತ್ ಹಿಡಿದು, ಬಿಳಿ ಕೋಟು ತೊಟ್ಟು
ಪ್ರತಿ ಉಸಿರನ್ನೂ ಮತ್ತೆ ಕೊಡುತ್ತಾನೆ

ಮಂತ್ರ ಹೇಳಲ್ಲ, ಮದ್ದು ಕೊಡ್ತಾನೆ
ಹರಕೆ ಕೇಳಲ್ಲ, ನಾಡಿ ಹಿಡಿತಾನೆ
ಕಣ್ಣೀರು ಒರೆಸೋ ಕೈ ಅಲ್ಲ ಅದು
ಜೀವನೇ ಮತ್ತೆ ಬರೆಯೋ ಕೈ

ಹೆರಿಗೆ ರೂಮಲ್ಲಿ "ಉಯ್ಯಾಲೆ" ಕಟ್ಟೋನು
ಐಸಿಯು ಒಳಗೆ "ಯಮನ" ಗೆದ್ದೋನು
ಕ್ಯಾನ್ಸರ್ ಅನ್ನೋ ರಾಕ್ಷಸನ ಜೊತೆ
ಪ್ರತಿ ದಿನ ಯುದ್ಧ ಮಾಡೋ ಸೈನಿಕ

ನಾವು ನೋವಲ್ಲಿ ದೇವರಿಗೆ ಹರಕೆ ಹೊರ್ತೀವಿ
ಆದ್ರೆ ದೇವರು ವೈದ್ಯನ ರೂಪದಲ್ಲಿ ಬಂದು
ಇಂಜೆಕ್ಷನ್ ಚುಚ್ಚಿ, ಟ್ಯಾಬ್ಲೆಟ್ ಕೊಟ್ಟು
"ಇನ್ನು ಭಯ ಬೇಡ" ಅಂತಾನೆ

ಫೀಸ್ ಜಾಸ್ತಿ ಅಂತ ಗೊಣಗ್ತೀವಿ
ಆದ್ರೆ ಪ್ರಾಣ ಉಳಿದ ಮೇಲೆ
ಆ ವೈದ್ಯನ ಮುಖದಲ್ಲಿ ಕಾಣೋ ನಗು
ಕೋಟಿ ಕೊಟ್ರೂ ಸಿಗಲ್ಲ

ವೈದ್ಯೋ ನಾರಾಯಣೋ ಹರಿಯೇ
ಇದು ಶ್ಲೋಕ ಅಲ್ಲ, ಅನುಭವ
ಸಾವು ಬಾಗಿಲು ತಟ್ಟಿದಾಗ
ಬಾಗಿಲು ತೆರೆಯೋ ದೇವರೇ ವೈದ್ಯ

:- ಎಸ್.ದುರಗಪ್ಪ.ಕುಷ್ಟಗಿ.

## ಅಗ್ನಿವೀರ ತರಬೇತಿಯನ್ನು ಪಡೆದು ಸ್ವ ಗ್ರಾಮಕ್ಕೆ ಮರಳಿದ ಬಸವರಾಜ್ ಅವರಿಗೆ ಗ್ರಾಮಸ್ಥರಿಂದ ಭವ್ಯ ಸ್ವಾಗತ

❑ ನೈಜ್ಯ ದೆಸೆ ನ್ಯೂಸ್

**ಕಾರಟಗಿ: ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಹಿರೇಬೊಮ್ಮನಾಳ ಗ್ರಾಮದ ಹೆಮ್ಮೆಯ ಯುವಕ ಕುಮಾರ್ ಬಸವರಾಜ್, ತಂದೆ ಹನುಮಂತಪ್ಪ ಹುದ್ದಾರ ಅವರು ಅಗ್ನಿವೀರ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸ್ವಗ್ರಾಮಕ್ಕೆ ಮರಳಿದ ಕ್ಷಣ ಗ್ರಾಮಸ್ಥರ ಪಾಲಿಗೆ ಹೆಮ್ಮೆಯ ಹಾಗೂ ಸಂಭ್ರಮದ ಕ್ಷಣವಾಗಿತ್ತು.**



ಸ್ವಗ್ರಾಮ ಪ್ರವೇಶಿಸಿದ ಕೂಡಲೇ ಗ್ರಾಮಸ್ಥರು ಭವ್ಯ ಸ್ವಾಗತ ಕೋರಿದರು. ಡೊಳ್ಳು-ತಾಶಾ ನಾದ, ಹೂಮಾಲೆಗಳ ಸುರಿಮಳೆ ಹಾಗೂ ಜಯಘೋಷಗಳ ನಡುವೆ ಕುಮಾರ್ ಬಸವರಾಜ್ ಅವರನ್ನು ಮೆರವಣಿಗೆಯ ಮೂಲಕ ಗ್ರಾಮಕ್ಕೆ ಕರೆತಂದರು. ದೇಶಸೇವೆಗೆ ಸನ್ನದ್ಧರಾದ ಯುವಕನ ಸಾಧನೆಯನ್ನು ಕೊಂಡಾಡಿದ ಗ್ರಾಮಸ್ಥರು, ಅವರ ಪರಿಶ್ರಮ ಮತ್ತು ಶಿಸ್ತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಹಿರಿಯರು, ಮಹಿಳೆಯರು, ಯುವಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸೇರಿ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿ ಕುಮಾರ್ ಬಸವರಾಜ್ ಅವರನ್ನು ಗೌರವಿಸಿದರು. ಈ ವೇಳೆ ಮಾತನಾಡಿದ ಮುಖಂಡರು, "ಗ್ರಾಮದ ಯುವಕರು ದೇಶಸೇವೆಯತ್ತ ಹೆಜ್ಜೆ ಇಡುವುದು ಹೆಮ್ಮೆಯ ಸಂಗತಿ. ಕುಮಾರ್ ಬಸವರಾಜ್ ಅವರ ಸಾಧನೆ ಇತರ ಯುವಕ-ರಿಗೂ ಪ್ರೇರಣೆಯಾಗಲಿ" ಎಂದು ಹೇಳಿದರು.

ಈ ಸಂದರ್ಭದಲ್ಲಿ ಊರಿನ ಮುಖಂಡರಾದ ಶರಣಪ್ಪ ಉಳ್ಳಾಗಡ್ಡಿ, ಜಗದೀಶ್ ಬೇವಿನಗಿಡ, ಶರಣಗೌಡ ಮಾಲಿ ಪಾಟೀಲ, ರಾಮಣ್ಣ ಮುಕ್ಕಣ್ಣನವರ್, ದೇವೇಂದ್ರಪ್ಪ ಮಡಿವಾಳರ, ಬಸಪ್ಪ ಕಾಸನಕಂಡಿ, ಹನುಮಂತಪ್ಪ ಉದ್ದಾರ, ಬಸವರಾಜ್ ಶೆಟ್ರ, ಶಶಿಕಲಾ ಉದ್ದಾರ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದು ಶುಭಾಶಯ ಕೋರಿದರು.

ಕಾರ್ಯಕ್ರಮವು ಆತ್ಮೀಯತೆ, ಗೌರವ ಹಾಗೂ ದೇಶಭಕ್ತಿಯ ಸಂದೇಶದೊಂದಿಗೆ ಯಶಸ್ವಿಯಾಗಿ ನೆರವೇರಿತು. ಕುಮಾರ್ ಬಸವರಾಜ್ ಅವರ ಮುಂದಿನ ಸೇವಾ ಜೀವನ ಉಜ್ವಲವಾಗಿರಲಿ ಎಂದು ಗ್ರಾಮಸ್ಥರು ಹಾರೈಸಿದರು. ಈ ಸಂಧರ್ಭದಲ್ಲಿ ಇಮಾಮ್ ಸಾಬ್ ಮೇಲಗಡೆ ಶಂಕ್ರಪ್ಪ ಗೋಂದಿ ಗುಂಡಪ್ಪ ಬೇಲಿಹಾಳ್ ಹಾಗೂ ಊರಿನ ಗುರು ಹಿರಿಯರು ಉಪಸ್ಥಿತರಿದ್ದರು.

## ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಡ್ಡ ಪರಿಶೀಲನೆ : ಹಿರಿಯ ಅಧಿಕಾರಿಗಳ ತಂಡದಿಂದ ಮನೆ ಮನೆ ಭೇಟಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ರಾಗಲಪರ್ವಿ ಪ್ರಾಥ-ಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಒಳಪಡುವ ಬನ್ನಿಗಾನೂರು ಗ್ರಾಮದಲ್ಲಿ ಇಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಮನೆ ಮನೆ ಭೇಟಿ ಪ್ರಕ್ರಿಯೆಯನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹಿರಿಯ ವೈದ್ಯಾಧಿಕಾ-ರಿಗಳ ಹಾಗೂ ಸಿಬ್ಬಂದಿಗಳ ತಂಡವು ಭೇಟಿ ನೀಡಿ ಅಡ್ಡ ಪರಿಶೀಲನೆ ನಡೆಸಿತು.**



ಕಾರ್ಯಕ್ರಮದ ಯಶಸ್ವಿ ಅನುಷ್ಠಾನ ಮತ್ತು ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳ ತಂಡವು ಜಂಟಿಯಾಗಿ ಈ ಪರಿಶೀಲನಾ ಕಾರ್ಯ ಚಟುವಟಿಕೆಯಲ್ಲಿ ಪಾಲ್ಗೊಂಡಿತ್ತು. ಈ ಮಹತ್ವದ ಭೇಟಿಯಲ್ಲಿ ಉಪ ಜಂಟಿ ನಿರ್ದೇಶಕರಾದ ಡಾ. ಅಂಬರಾಯ ಎಸ್. ರುದ್ರವಾಡಿ ಸರ್, ಜಿಲ್ಲಾ ಮಟ್ಟದ ಅಧಿಕಾ-ರಿಗಳಾದ ಡಾ. ಚಂದ್ರಶೇಖರಯ್ಯ , ತಾಲೂಕು ಆರೋಗ್ಯಾಧಿಕಾರಿಗಳಾದ ಡಾ. ಅಯ್ಯನಗೌಡ ಸರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾ-ರಿಗಳಾದ ಈಶ್ವರ್ ದಾಸಪ್ಪನವರ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ನವೀನ್ ಸರ್ ಹಾಗೂ ರಾಗಲಪರ್ವಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಶ್ವೇತಾಂಬರಿ ಮೇಡಂ ಅವರು ಉಪಸ್ಥಿತರಿದ್ದರು.

ಪರಿಶೀಲನೆಯ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳ ತಂಡವು ಬನ್ನಿಗಾನೂರು ಗ್ರಾಮದ ವಿವಿಧ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ, ಶೂನ್ಯದಿಂದ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡರು. ಲಸಿಕೆ ಹಾಕಿದ ನಂತರ ಮನೆಗಳ ಬಾಗಿಲಿಗೆ ಹಾಕಲಾಗುವ ಗುರುತುಗಳನ್ನು ಪರಿಶೀಲಿಸಿದ ಅಧಿಕಾರಿಗಳು, ಲಸಿಕಾ ಅಭಿಯಾನದ ಪ್ರಗತಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

ದೇಶವನ್ನು ಪೋಲಿಯೋ ಮುಕ್ತವಾಗಿಡಲು ಪ್ರತಿಯೊಂದು ಮಗುವಿಗೂ ಲಸಿಕೆ ತಲುಪುವುದು ಅತ್ಯಂತ ಕಡ್ಡಾಯವಾಗಿದ್ದು, ಆರೋಗ್ಯ ಕಾರ್ಯಕರ್ತರು ಮತ್ತು ಆಶಾ ಕಾರ್ಯಕರ್ತೆಯರು ಈ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ತಾಲೂಕಾ ಮೇಲ್ವಿಚಾರಕ ಎಫ್.ಎ.ಹಣಗಿ,ಸಮುದಾಯ ಆರೋಗ್ಯಾಧಿಕಾರಿಯಾದ ರಾಜಕುಮಾರ,ಫಕಿರಚಂದ,ಗಂಗಮ್ಮ,ಆಶಾ.ಕಾರ್ಯಕರ್ತೆ ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

## ಕಟ್ಟಡ ಕುಸಿತ ದುರಂತದಲ್ಲಿ ಮೃತಪಟ್ಟ ವಿದ್ಯಾರ್ಥಿಗಳ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಮಾಲೀಕರ ವಿರುದ್ಧ ಕಠಿಣ ಕ್ರಮಕ್ಕೆ ದಲಿತ ವಿದ್ಯಾರ್ಥಿ ಪರಿಷತ್ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಇತ್ತೀಚೆಗೆ ದೇವದುರ್ಗ ಪಟ್ಟಣದಲ್ಲಿ ಸಂಭವಿಸಿದ ಕಟ್ಟಡ ಕುಸಿತ ದುರಂತದಲ್ಲಿ ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ದಲಿತ ವಿದ್ಯಾರ್ಥಿ ಪರಿಷತ್ (ರಿ) ತಾಲೂಕು ಸಮಿತಿಯು, ದುರಂತಕ್ಕೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದೆ.**





ಮಂಗಳವಾರ ರಾಯಚೂರು ಜಿಲ್ಲೆಯ ದೇವದುರ್ಗ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ

### ಪ್ರಮುಖ ಬೇಡಿಕೆಗಳು:

- ಕಟ್ಟಡ ಕುಸಿತ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ, ನಿರ್ಲಕ್ಷ್ಯಕ್ಕೆ ಕಾರಣರಾದ ಎಲ್ಲರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು.
- ಮೃತಪಟ್ಟ ವಿದ್ಯಾರ್ಥಿಗಳ ಕುಟುಂಬಗಳಿಗೆ ರಾಜ್ಯ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು.
- ಮಾನವೀಯತೆಯ ಆಧಾರದ ಮೇಲೆ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು.
- ಸಂತ್ರಸ್ತ ಕುಟುಂಬಗಳಿಗೆ ಸಮರ್ಪಕ ಪುನರ್ವಸತಿ ಕಲ್ಪಿಸಬೇಕು.
- ನಿರ್ಲಕ್ಷ್ಯ ವಹಿಸಿದ ಕಟ್ಟಡದ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು.

ಮನವಿ ಸಲ್ಲಿಸಿದ ಸಂಘಟನೆಯು, ಉನ್ನತ ಶಿಕ್ಷಣದ ಕನಸು ಹೊತ್ತು ಸರ್ಕಾರಿ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಇಂತಹ ದುರಂತದಲ್ಲಿ ಪ್ರಾಣ ಕಳೆದುಕೊಂಡಿರುವುದು ಅತ್ಯಂತ ದುಃಖಕರ ಮತ್ತು ಆತಂಕಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿತು. ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಅಧ್ಯಕ್ಷ ಬಸವರಾಜ ಜಯಂ, ಗೌರವಾಧ್ಯಕ್ಷ ವೆಂಕಟೇಶ ಮುಕ್ಕಣ್ಣ, ಉಪಾಧ್ಯಕ್ಷ ಈರಪ್ಪ ಅರಗೇಲ್, ಪ್ರಧಾನ ಕಾರ್ಯದರ್ಶಿ ಚನ್ನಬಸವ ಮೇತ್ರಿ, ಕಾರ್ಯದರ್ಶಿ ಡೇವಿಡ್ ಮೇತ್ರಿ, ಖಜಾಂಚಿ ಲಕ್ಷ್ಮಣ ಮಲಕೋಜ ಸೇರಿದಂತೆ ಸಂಘಟನೆಯ ಪ್ರಮುಖರು ಉಪಸ್ಥಿತರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಕಂಪ್ಲಿ-ಕೋಟೆಯಲ್ಲಿ ಕಾರ ಹುಣ್ಣಿಮೆ ನಿಮಿತ್ಯ ಸಂಭ್ರಮದಿಂದ ಎತ್ತುಗಳ ಓಟ : ವಿಜೇತ ಎತ್ತುಗಳ ಮಾಲೀಕರಿಗೆ ಶಾಸಕರಿಂದ ನಗದು ಬಹುಮಾನ ವಿತರಣೆ



❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಮುಂಗಾರು ಪ್ರವೇಶದ ಮೊದಲ ಹಬ್ಬ ಎಂದು ಕರೆಸಿಕೊಳ್ಳುವ ಕಾರ ಹುಣ್ಣಿವೆಯನ್ನು ಕಂಪ್ಲಿ-ಕೋಟೆಯಲ್ಲಿ ಶಾಸಕ ಜೆ.ಎನ್.ಗಣೇಶ ಅವರ ಅದೇಶದ ಮೇರೆಗೆ ಆಪ್ತ ಸಹಾಯಕ ಕಂಬತ್ ಧನ್‌ರಾಜ್ ನೇತೃತ್ವದಲ್ಲಿ ರೈತರು ಸೋಮವಾರ ಎತ್ತುಗಳ ಕರಿ ಹರಿಸುವ ಮೂಲಕ ಸಡಗರ ಸಂಭ್ರಮದಿಂದ ಆಚರಿಸಲಾಯಿತು.**

ಕಂಪ್ಲಿ-ಕೋಟೆಯ ಹೊಳೆ ಆಂಜನೇಯ್ಯ ದೇವಸ್ಥಾನ ಬಳಿಯಲ್ಲಿರುವ ಗಂಡುಗಲಿ ಕುಮಾರ ರಾಮನ ಕೋಟೆಯ ಬುಡ್ಡೇಕಲ್ಲು ಬಳಿಯಲ್ಲಿ ಎತ್ತುಗಳ ಓಟ ನಡೆಯಿತು. ಈ ಸ್ಪರ್ಧೆಯಲ್ಲಿ ವಿಜೇತ ಎತ್ತುಗಳ ಮಾಲೀಕರ ಸಾಬನ್ನಿ ಸಾಧಿಕ್ ಸಾಬ್ ಇವರಿಗೆ ಶಾಸಕ ಜೆ.ಎನ್. ಗಣೇಶ್ ಅವರು ನೀಡಿದ 5000 ರೂ.ಗಳ ನಗದು ಬಹುಮಾನವನ್ನು ಆಪ್ತ ಸಹಾಯಕ ಧನ್‌ರಾಜ್ ವಿತರಿಸಿದರು. ನಂತರ ಕೋಟೆ ಪ್ರದೇಶದಲ್ಲಿ ವಿಜೇತ ಎತ್ತುಗಳ ಭವ್ಯ ಮೆರವಣಿಗೆ ಮಾಡುವ ಮೂಲಕ ಅನ್ನದಾತರು ಸಂಭ್ರಮಿಸಿದರು.

ತದನಂತರ ಆಪ್ತ ಸಹಾಯಕ ಕಂಬತ್ ಧನ್‌ರಾಜ್ ಮಾತನಾಡಿ, ನಮ್ಮ ದೇಶದ ಬೆನ್ನೆಲುಬಾದ ಅನ್ನದಾತನಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಎತ್ತುಗಳನ್ನು ಸಿಂಗರಿಸಿ, ಪೂಜಿಸಿ, ಭೂಮಿ ತಾಯಿಗೆ ಕೃತಜ್ಞತೆ ಸಲ್ಲಿಸುವ ಸೊಗಡಿನ ಪುಣ್ಯ ದಿನವಿದು. ಈ ವರ್ಷ ಮುಂಗಾರು ಮಳೆ ಉತ್ತಮವಾಗಿ ಸುರಿದು, ಹೊಲಗದ್ದೆಗಳೆಲ್ಲ ಹಸಿರಿನಿಂದ ಕಂಗೊಳಿಸಲಿ, ರೈತರ ಬದುಕು ಹಸನಾಗಲಿ ಎಂದು ಪ್ರಾರ್ಥಿಸುತ್ತೇನೆ. ಕಂಪ್ಲಿ-ಕೋಟೆಯಲ್ಲಿ ಹರಿದ ಎತ್ತುಗಳ ಕರಿಯಲ್ಲಿ ವಿಜೇತ ಎತ್ತುಗಳ ಮಾಲೀಕರಿಗೆ ಶಾಸಕರ ಆದೇಶದಂತೆ ನಗದು ಬಹುಮಾನ ವಿತರಿಸಲಾಯಿತು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಕಟ್ಟೆ ಸೂಗೂರು ಈರಣ್ಣ, ಸುರೇಶ ರೆಡ್ಡಿ, ನವೀನ್ ಮಣ್ಣೂರ, ಕೋಟೆಮೆಗಳ ನಾಗರಾಜ್, ಮಕ್ಬುಲ್, ಅದ್ದಪ್ಪ ಪರಸಪ್ಪ, ಬಾಗ್ಲಿ ಸೂರಿ ಸೇರಿದಂತೆ ರೈತರಿದ್ದರು.

## ಬಸ್ಸಿನ್ಯಾಗ ಕುಂತರ ಊರು ಮುಟ್ಟತ್ತನಕ ಗ್ಯಾರಂಟಿ ಇಲ್ರಿ,ಎಲ್ಲಿ ಕೆಡುತ್ತವೊ ಗೊತ್ತಿಲ್ರಿ,ಇದು ಮಸ್ಕಿ ಡಿಪೊ ಕಥೆ

❑ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮಸ್ಕಿ ಘಟಕದ ಬಸ್ ಗಳ ಕಥೆ ಹೇಳತಿ-ರದು,ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಓಡಾಡುವ ಬಸ್ ಗಳು ಹಳೆವಾಗಿದ್ದು, ಒಂದಲ್ಲ ಒಂದು ಸಮಸ್ಯೆಯಿಂದ ಬಸ್ ಗಳು ಕೆಟ್ಟು ಅರ್ಧದಲ್ಲಿಯೇ ನಿಲ್ಲುವ ಪ್ರಸಂಗ ಅನೇಕಕಡೆ ಕಂಡುಬಂದಿರುವ ಸಾಕ್ಷಿಯಾಗಿದೆ.**




ಇಂದು ಹಾಲಾಪೂರದಲ್ಲಿ ಬಸ್ ಚಲಿಸುವಾಗ ಏಕಾಏಕಿ ನಿಂತಾಗ,ಚಾಲಕ ಮೇಲೆಂದ ಮೇಲೆ ಎಷ್ಟೋತ್ತು ಚಾಲನೆ ಪ್ರಯುತ್ನ ಪಟ್ಟರು, ಬಸ್ ಮಾತ್ರ ಮುಂದಕ್ಕೆ ಹೊಗುತ್ತಿಲ್ಲ, ಬರಿ ಹಿಂದಕ್ಕೆ ಹೊಗುತ್ತಿತ್ತು ಇದ-ರಿಂದ ಗಾಬರಿಗೊಂಡ ಅನೇಕ ಪ್ರಯಾಣಿಕರು ಬಸ್ಸಿನಿಂದ ಅರ್ಧಕ್ಕೆ ಕೆಳಗೆ ಇಳಿದು ಈಕಡೆ ಮಸ್ಕಿ ಮುಟ್ಟಲಿಲ್ಲ ,ಆಕಡೆ ಕವಿತಾಳ ತಲುಪಲಿಲ್ಲ ಎಂದು ಪ್ರಯಾಣಿಕ ಹನುಮಂತ ತೊರಣದಿನ್ನಿ ಮಾತಾಡಿ ನಮ್ಮಕಡೆ ಬಸ್ಸಿನ್ಯಾಗ ಕುಂತರ ನಾವು ಮಸ್ಕಿ ಮುಟ್ಟತನಕ ಗ್ಯಾರಂಟಿ ಇಲ್ರಿ,ಯಾಕಂದ್ರ ನಮ ಮಸ್ಕಿ ಡಿಪೊ ಬಸ್ ಗಳು ಬೆಂಗ್ಳೂರುಲ್ಲಿ ತುಮಕೂರಲ್ಲಿ ಓಡಿಸಿ ಓಡಿಸಿ ತೀರ ಹಳೆ ಬಸ್ಸಗಳಾದ ಮೇಲೆ ನಮ್ಮ ಕಡೆ ಕಳ್ಸತ್ತಾರಾ,ಅವು ಓಡಾಟ ಯಾಗ ಮಾಡ್ತವಾ ಬರಿ ಅರ್ಧದಲ್ಲಿ ನಿಲ್ತಾವಾ ಎಂದು ಹೇಳಿದರು.

ಇದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ, ಎಷ್ಟೋ ಸಲ ಬಸ್ ಗಳು ಕೆಟ್ಟು ನಿಂತಾಗ,ವಿದ್ಯಾರ್ಥಿಗಳು ಶಾಲಾ ಕಾಲೇಜ ಗೆ ಹೊಗೊದೆ ಇರೊ ಉದಾಹರಣೆ ಇವೆ ಎಂದು ವಿದ್ಯಾರ್ಥಿಗಳು ತಮ್ಮ ನೋವು ಹಂಚಿಕೊಂಡರು.

# ಸಿಂಧನೂರಿನ ಜನತೆಯ ಪ್ರೀತಿ ವಿಶ್ವಾಸಕ್ಕೆ ಸದಾ ಚಿರಋಣಿಯಾಗಿರುತ್ತೇನೆ ಅನಗವಾಡಿ ನಬಿ ನದಾಫ್

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಭಾರತೀಯ ಜನತಾ ಪಾರ್ಟಿಯ ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯದರ್ಶಿಗಳು ಹಾಗೂ ಬಾಗಲಕೋಟೆಯ ನಮನ ಫೌಂಡೇಶನ್ ಸಂಸ್ಥಾಪಕರಾದ ಅನಗವಾಡಿ ನಬಿ. ಮ. ನದಾಫ್ ಅವರ 40ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವು ಭಾರತೀಯ ಜನತಾ ಪಾರ್ಟಿ ಅಲ್ಪಸಂಖ್ಯಾತರ ಮೋರ್ಚಾ ಸಿಂಧನೂರು ವತಿಯಿಂದ ಕಾರುಣ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ-ರಿಸುವ ಮೂಲಕ " ಆತ್ಮೀಯತೆಯ ಅನುಬಂಧ" ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಅರ್ಥಪೂರ್ಣವಾಗಿ ನೆರವೇರಿತು.**




ಈ ಕಾರ್ಯಕ್ರಮವನ್ನು ಸಿಂಧನೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ಕೆ. ಕರಿಯಪ್ಪ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯದರ್ಶಿಗಳಾದ ಅನಗವಾಡಿ ನಬಿ. ಮ.ನದಾಫ್ ಅವರನ್ನು ಆಶ್ರಮದ ವತಿಯಿಂದ ಹಾಗೂ ಹಲವಾರು ಬಿಜೆಪಿ ಕಾರ್ಯಕರ್ತರು ಸನ್ಮಾನಿಸಿ ಗೌರವಿಸಿ ಶುಭ ಹಾರೈಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಬಿಜೆಪಿ ಮುಖಂಡರಾದ ಕೆ.ಕರಿಯಪ್ಪ ಮಾತನಾಡಿ ನಮ್ಮ ಅನಗವಾಡಿಯ ನಬಿ ನದಾಫ್ ಅವರ ಸಮಾಜಮುಖಿ ಕಾರ್ಯಗಳನ್ನು ಪ್ರತಿಯೊಬ್ಬ ಯುವಕರು ಮೈಗೂಡಿಸಿಕೊಳ್ಳಬೇಕು.

ನಮ್ಮ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಾಗಿ ಇಡೀ ರಾಜ್ಯಾದ್ಯಂತ ಪಕ್ಷದ ಸಿದ್ಧಾಂತಗಳನ್ನು ಮತ್ತು ನಾಡಿನ ಅಭಿವೃದ್ಧಿಗಾಗಿ ಪಕ್ಷವು ಹಮ್ಮಿಕೊಂಡಿರುವ ಹಲವಾರು ಕಾರ್ಯಕ್ರಮಗಳಲ್ಲಿ ಹುಚ್ಚು ಕತೆಯಿಂದ ಭಾಗವಹಿಸಿ ಪಕ್ಷ ಸಂಘಟನೆ ಮಾಡುವುದರಲ್ಲಿ ನಬಿ ನದಾಫ್ ಅವರ ಕಾರ್ಯವನ್ನು ಪಕ್ಷವು ಶ್ಲಾಘಿಸುತ್ತಿದೆ. ನಮ್ಮ ಸಿಂಧನೂರಿನ ಕಾರುಣ್ಯಾಶ್ರಮದ ಸೇವೆ ಭಗವಂತನ ಪೂಜೆಗಿಂತ ಮಿಗಿಲಾದುದು. ಇಂತಹ ಪುಣ್ಯ ಕ್ಷೇತ್ರದಲ್ಲಿ ಅವರ ಜನ್ಮದಿನ ಸಾರ್ಥಕ ದಿನವಾಗಿದೆ. ಕಾರುಣ್ಯಾಶ್ರಮದ ಸೇವೆಯಲ್ಲಿ ನಮ್ಮ ಸ್ಪಂದನೆ ನಿರಂತರವಾಗಿರುತ್ತದೆ. ಸಮಾಜದ ಯಾವುದೇ ಟೀಕೆ ಟಿಪ್ಪಣಿ ಅವಮಾನ ಅಪ ಪ್ರಚಾರಕ್ಕೆ ಬಗ್ಗದೆ ನೊಂದ ಜೀವಿಗಳ ನಾಡಿಮಿಡಿತವಾಗಿ ಅನಾಥರಿಗಾಗಿ ಮಾಡುತ್ತಿರುವ ಈ ಕಾರುಣ್ಯ ಸಂಸ್ಥೆಯು ನಮ್ಮೆಲ್ಲರಿಗೆ ಸ್ವಂತ ಕುಟುಂಬವಾಗಿದೆ.

ಇಂತಹ ಕುಟುಂಬದಲ್ಲಿ ಇಂದು ಜನ್ಮದಿನವನ್ನು ಆಚರಿಸಿಕೊಳ್ಳುವ ನಮ್ಮ ಪಕ್ಷದ ನಬಿ ನದಾಫ್ ಅವರಿಗೆ ಸಿಂಧನೂರಿನ ಭಾರತೀಯ ಜನತಾ ಪಾರ್ಟಿಯ ವತಿಯಿಂದ ಜನ್ಮದಿನದ ಶುಭಾಶಯಗಳು ಎಂದು ಮಾತನಾಡಿ ಶುಭ ಹಾರೈಸಿದರು. ನಂತರ ಬಾಗಲಕೋಟೆಯ ನಮನ ಫೌಂಡೇಶನ್ ಸಂಸ್ಥಾಪಕರು ಹಾಗೂ ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯದರ್ಶಿಗಳಾದ ಅನಗವಾಡಿ ನಬಿ.ಮ.ನದಾಫ್ ಮಾತನಾಡಿ ಇಂದಿನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ನಮ್ಮ ಅಣ್ಣನವರಾದ ಕೆ.ಕರಿಯಪ್ಪ ಅವರು 2028ರ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಶಾಸಕರಾಗಬೇಕೆನ್ನುವುದು ನಮ್ಮೆಲ್ಲರ ಆಶಯವಾಗಿದೆ.

ಈ ನಮ್ಮ ಕಾರುಣ್ಯಾಶ್ರಮದ ಹಿರೇಮಠ ಗುರುಗಳ ಜೊತೆ ನಾನು ಹಾಗೂ ನನ್ನ ಬಿಜೆಪಿ ಪಕ್ಷ ಸದಾವ ಕಾಲವಿರುತ್ತದೆ ಈ ನಮ್ಮ ಸಿಂಧಲೂರಿನ ಜನತೆಯ ಪ್ರೀತಿ ವಿಶ್ವಾಸಕ್ಕೆ ನಾನು ಸದಾ ಚಿರಋಣಿಯಾಗಿರುತ್ತೇನೆ. ನಮ್ಮ ಸ್ವಂತ ಬಾಗಲಕೋಟೆಗಿಂತ ಇಲ್ಲಿನ ಜನರು ನನ್ನನ್ನು ಬಹಳ ಪ್ರೀತಿ ವಿಶ್ವಾಸ ಗೌರವದಿಂದ ಕಾಣುತ್ತಿರುವುದು ನನ್ನ ಕುಟುಂಬಕ್ಕೆ ತುಂಬಾ ಸಂತೋಷವಾಗಿದೆ.

ಇಂದಿನ ಈ ನನ್ನ ಜನ್ಮ ಸಾಥ-ರ್ಕ ದಿನ ಆಶ್ರಮದಲ್ಲಿನ ಎಲ್ಲಾ ಹಿರಿಯರ ಆಶೀರ್ವಾದ ಮತ್ತು ಸಮಸ್ತ ಸಿಂಧನೂರಿನ ಜನತೆಯ ಆಶೀರ್ವಾದದೊಂದಿಗೆ ಆಚರಿಸಿಕೊಂಡು ಪುನೀತನಾಗಿದ್ದೇನೆ. ನನ್ನ ಜನ್ಮಕ್ಕೆ ಹರಸಿ ಹಾರೈಸಿ ಆಶೀರ್ವದಿಸಿರುವ ಸಮಸ್ತ ಜನತೆಗೆ ಹೃತ್ಪೂರ್ವಕ ಧನ್ಯವಾದಗಳು ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಿರಾಜ್ ಪಾಷಾ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರು. ಶರಣು ಗೊರೆಬಾಳ ಬಿಜೆಪಿ ಮುಖಂಡರು. ರಾಮದಾಸ ಸಾಲಗುಂದ ಉಪಾಧ್ಯಕ್ಷರು ಬಿಜೆಪಿ ಗ್ರಾಮೀಣ ಮಂಡಲ ಮಹಾನಂದಮ್ಮ ಅಧ್ಯಕ್ಷರು ಬಿಜೆಪಿ ಮಹಿಳಾ ಮೋರ್ಚಾ ಗ್ರಾಮೀಣ ಮಂಡಲ. ಡಾ.ಮಲ್ಲಿಕಾರ್ಜುನ ಪಲ್ಲೇದ ಬಿಜೆಪಿ ಮುಖಂಡರು. ಮಾರೆಪ್ಪ ಕೆಂಗಲ್ ಹಿರಿಯ ಕಲಾವಿದರು. ಶಾಮಿದ್ ಪಾಟೀಲ್ ಬಿಜೆಪಿ ಮುಖಂಡರು ಮಸ್ಕಿ ವಿಧಾನಸಭಾ ಕ್ಷೇತ್ರ. ಅನ್ವರ್ ಪಾಷಾ ಅಧ್ಯಕ್ಷರು ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ಮಸ್ಕಿ ವಿಧಾನಸಭಾ ಕ್ಷೇತ್ರ ಹುಸೇನ್ ಬಾಷಾ ಬಿಜೆಪಿ ಮುಖಂಡರು ಮಸ್ಕಿ ವಿಧಾನಸಭಾ ಕ್ಷೇತ್ರ. ಭಾಷಾ ಕಲ್ಮನಿ ಉಪಾಧ್ಯಕ್ಷರು ಬಿಜೆಪಿ ಮಸ್ಕಿ ವಿಧಾನಸಭಾ ಕ್ಷೇತ್ರ ಹಾಗೂ ಜಿಲ್ಲಾ ಉಪಾಧ್ಯಕ್ಷರು ಛಾಯಾಗ್ರಹಕರ ಸಂಘ ರಾಯಚೂರು ಜಿಲ್ಲಾ. ಬಸವರಾಜ ಗ್ರಾ. ಪಂ. ಸದಸ್ಯರು ದೀನ ಸಮುದ್ರ. ರಾಜು ಅಡವಿಬಾವಿ ಬಿಜೆಪಿ ಯುವ ಮುಖಂಡರು ಸಿಂಧನೂರು. ಚಾಂದ್ ಪಾಷಾ ಎತ್ನಾರಿ ಬಿಜೆಪಿ ಮುಖಂಡರು ಸಿಂಧನೂರು.

ಕಾಶಿನಾಥ ಬಿಜೆಪಿ ಯುವ ಮುಖಂಡರು. ರಮೇಶ ಮಡಿವಾಳ. ದರ್ಶನ್. ಹನುಮಂತಪ್ಪ ಬಾರಕೇರ ನಿವೃತ್ತ ಎ ಎಸ್. ಐ. ಅಧಿಕಾರಿಗಳು ಮಸ್ಕಿ ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ.ಜ್ಯೋತಿ. ಹಾಗೂ ಅನೇಕ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯ ನೇಮಕಾತಿ 2026 ? 61 ಪಿಯೋನ್, ಟೈಪಿಸ್ಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 30, 2026**

ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯ ನೇಮಕಾತಿ 2026: 61 ಪಿಯೋನ್, ಟೈಪಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯದ ಅಧಿಕೃತ ಅಧಿಸೂಚನೆ ಜೂನ್ 2026 ರ ಮೂಲಕ ಪಿಯೋನ್, ಟೈಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಚಿಕ್ಕಮಗಳೂರು ಇ-ಕೋರ್ಟ್ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಚಿಕ್ಕಮಗಳೂರು ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28-ಜುಲೈ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 29-06-2026

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28-ಜುಲೈ-2026

ಅಧಿಕೃತ ವೆಬ್‌ಸೈಟ್: chikkamagaluru.dcourts.gov.in

## ರಸ್ತೆ ದುರಸ್ತಿ ಕಾಮಗಾರಿ ಕೈಗೊಳ್ಳುವ ಮೊದಲು ಅಧಿಕೃತ ಸರ್ವೆ ನಡೆಸಿ ರೈತರ ಪಟ್ಟ ಭೂಮಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳುವಂತೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ: ತಾಲೂಕಿನ ಹೊನ್ನಹಳ್ಳಿ ಗ್ರಾಮದ ಸರ್ವೇ ನಂ.36, 38 ಹಾಗೂ 39ರ ಭೂಮಿಗಳಿಗೆ ಹೊಂದಿಕೊಂಡಿರುವ ರಸ್ತೆ ದುರಸ್ತಿ ಕಾಮಗಾರಿ ಕೈಗೊಳ್ಳುವ ಮೊದಲು ಅಧಿಕೃತ ಸರ್ವೆ ನಡೆಸಿ ರೈತರ ಪಟ್ಟ ಭೂಮಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳುವ ಜೊತೆಗೆ ಜಮೀನು ಹದ್ದುಬಸ್ತು ಮಾಡುವವರೆಗೂ ಮನೆಗಳ ತೆರವು ಮಾಡಬಾರದೆಂದು ಆಗ್ರಹಿಸಿ,

ಪಿಂಜಾರ್ ನದಾಫ್ ಸಂಘದ ನೇತೃತ್ವದಲ್ಲಿ ಹೊನ್ನಳ್ಳಿ ಗ್ರಾಮಸ್ಥರು ಪಟ್ಟಣದ ತಹಶೀಲ್ದಾರ್ ಕಛೇರಿಯಲ್ಲಿ ತಹಶೀಲ್ದಾರ್ ಜೂಗಲ್ ಮಂಜುನಾಯಕಗೆ ಮನವಿ ಪತ್ರ ಸೋಮವಾರ ಸಲ್ಲಿಸಿದರು. ನಂತರ ಪಿಂಜಾರ್ ನದಾಫ್ ಸಂಘದ ಅಧ್ಯಕ್ಷ ಓ.ಎಸ್.ದಾದಾಪೀರ್ ಮಾತನಾಡಿ, ಹೊನ್ನಹಳ್ಳಿ ಗ್ರಾಮದ ಸರ್ವೇ ನಂ. 36, 38 ಹಾಗೂ 39 ರಲ್ಲಿರುವ ನಮ್ಮ ಪಟ್ಟ ಭೂಮಿಗಳು ಗ್ರಾಮದ ರಸ್ತೆಗೆ ಹೊಂದಿಕೊಂಡಿವೆ. ಪ್ರಸ್ತುತ ಸರ್ಕಾರ ರಸ್ತೆ ದುರಸ್ತಿ ಹಾಗೂ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿರುವುದನ್ನು ನಾವು ಸ್ವಾಗತಿಸುತ್ತೇವೆ ಮತ್ತು ಕಾಮಗಾರಿಗೆ ನಮ್ಮ ಸಂಪೂರ್ಣ ಸಹಕಾರವಿದೆ.

ಆದರೆ, ರಸ್ತೆ ಅಭಿವೃದ್ಧಿ ಕಾಮಗಾರಿಯ ನೆವದಲ್ಲಿ ಗುತ್ತಿಗೆದಾರರು ರಸ್ತೆ ವ್ಯಾಪ್ತಿಯನ್ನು ಮೀರಿ ನಮ್ಮ ಪಟ್ಟ ಭೂಮಿಯನ್ನು ಬಳಸಲು ಮುಂದಾಗಿರುವುದರಿಂದ ನಮಗೆ ಅನ್ಯಾಯವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಜೀವನೋಪಾಯವು ಈ ಅಲ್ಪ ಪ್ರಮಾಣದ ಕೃಷಿ ಭೂಮಿಯನ್ನೇ ಅವಲಂಬಿಸಿರುವುದರಿಂದ, ಯಾವುದೇ ಕಾನೂನುಬದ್ಧ ಭೂಸ್ವಾಧೀನ ಪ್ರಕ್ರಿಯೆ ಅಥವಾ ಅಧಿಕೃತ ಸರ್ವೆ ನಡೆಸದೆ ನಮ್ಮ ಭೂಮಿಯನ್ನು ರಸ್ತೆಗೆ ಬಳಸುವುದು ನಮ್ಮ ಹಕ್ಕುಗಳಿಗೆ ಧಕ್ಕೆ ಉಂಟುಮಾಡುತ್ತದೆ.


ಆದ್ದರಿಂದ, ರಸ್ತೆ ಕಾಮಗಾರಿ ಆರಂಭಿಸುವ ಮೊದಲು ದಾಖಲೆಗಳ ಪ್ರಕಾರ ರಸ್ತೆಯ ಮೂಲ ಅಗಲ ಹಾಗೂ ಗಡಿಯನ್ನು ಪರಿಶೀಲಿಸಿ, ರಸ್ತೆ ಎರಡೂ ಬದಿಯಲ್ಲಿರುವ ಸರ್ವೇ ನಂ. 36, 38 ಹಾಗೂ 39 ರ ಭೂಮಿಗಳನ್ನೂ ಒಳಗೊಂಡಂತೆ ಸಂಬಂಧಿಸಿದ ಎಲ್ಲಾ ಜಮೀನುಗಳ ಅಧಿಕೃತ ಸರ್ವೆ ನಡೆಸಿ, ರೈತರ ಪಟ್ಟ ಭೂಮಿಗೆ ಯಾವುದೇ ರೀತಿಯ ಹಾನಿಯಾಗದಂತೆ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಬೇಕು. ಸರ್ವೆ ಕಾರ್ಯಕ್ಕೆ ಅಗತ್ಯವಿರುವ ಸರ್ಕಾರಿ ಶುಲ್ಕ ಅಥವಾ ವೆಚ್ಚವನ್ನು ಭರಿಸಲು ನಾವು ರೈತರು ಸಿದ್ಧರಿದ್ದೇವೆ. ಹೀಗಾಗಿ, ಯಾವುದೇ ರೈತನ ಭೂಮಿ ಅನ್ಯಾಯವಾಗಿ ರಸ್ತೆಗೆ ಸೇರದಂತೆ ಸೂಕ್ತ ಕ್ರಮ ಕೈಗೊಂಡು, ಶೀಘ್ರದಲ್ಲೇ ಸರ್ವೆ ನಡೆಸಿ ನ್ಯಾಯ ಒದಗಿಸಬೇಕಾ ವಿನಂತಿಸುತ್ತೇವೆ.

ಆದ್ದರಿಂದ ತಮ್ಮಲ್ಲಿ ವಿನಮ್ರವಾಗಿ ಕೋರುವುದೇನೆಂದರೆ, ರಸ್ತೆ ಕಾಮಗಾರಿ ಆರಂಭಿಸುವ ಮೊದಲು ದಾಖಲೆಗಳ ಆಧಾರದ ಮೇಲೆ ರಸ್ತೆಯ ಮೂಲ ಅಗಲವನ್ನು ಪರಿಶೀಲಿಸಬೇಕು. ಸರ್ವೇ ನಂ. 36, 38 ಹಾಗೂ 39 ಸೇರಿದಂತೆ ರಸ್ತೆ ಪಕ್ಕದ ಎಲ್ಲಾ ಭೂಮಿಗಳ ಅಧಿಕೃತ ಸರ್ವೆ ನಡೆಸಬೇಕು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಪಿ.ರಾಜಸಾಬ್, ಪಿ.ಜಾಕೀರ್ ಬಾಷಾ, ಪಿ.ಸುಬಾನ್ ಸಾಬ್, ಹೊನ್ನೂರಸಾಬ್, ಮೌಲಾಸಾಬ್, ಹೊನ್ನೂರಮ್ಮ, ಮೌಲಮ್ಮ, ಹೊನ್ನೂರಬೀ ಇದ್ಧರು.

## ಹಾಲಾಪೂರ:ಎಸ್ ಆಯ್ ಆರ್ ಮನೆ ಸಮೀಕ್ಷೆ ಆರಂಭ,ಎಲ್ಲರೂ ಸಹಕರಿಸಿ: ಮಹೇಶ ಪಾಟೀಲ್ ಅರ್ ಐ

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ ಇಂದಿನಿಂದ ಮನೆ ಮನೆ ಸಮೀಕ್ಷೆಗೆ ಎನೊಮಿರಷನ್ ಪ್ರಕ್ರಿಯೆಗೆ ಹಾಲಾಪೂರ ನಾಡ ಕಛೇರಿ ಕಂದಾಯ ನಿರೀಕ್ಷಕ ಮಹೇಶ ಪಾಟೀಲ್ ಚಾಲನೆ ನೀಡಿ ಮಾತನಾಡಿ ಪ್ರತಿಯೊಬ್ಬ ಮತದಾರರು ಕುಟುಂಬ ಸದಸ್ಯರೊಂದಿಗೆ ಬಿ ಎಲ್ ಒ ಗಳು ಬಂದಾಗ ಅಗತ್ಯ ದಾಖಲೆಗಳು ಕೊಟ್ಟು ಸಹಕರಿಸಿ ಎಂದು ಹೇಳಿದರು.



ನಂತರ ಮುಖ್ಯ ಶಿಕ್ಷಕ ಮಂಜುನಾಥ ಹಾಲಾಪೂರ ಮಾತನಾಡಿ ನಾವು ನಿಮ್ಮ ಮನೆಗೆ ಬಂದಾಗ ಸಹಕಾರ ಜೊತೆಗೆ ಅಗತ್ಯ ದಾಖಲೆ ನೀಡುವುದರ ಮೂಲಕ ನಿಮ್ಮ ವಿವರಗಳನ್ನು ಮತದಾರರ ಪಟ್ಟಿಯಲ್ಲಿ ದಾಗಲಾಗುವುದನ್ನು ಸರಿಯಾಗಿ ಖಚಿತಪಡಿಸಿಕೊಳ್ಳಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮ ಲೆಕ್ಕಾದಿಕಾರಿ ಕೃಷ್ಣಪ್ಪ , ಶಿಕ್ಷಕಿ ಬಸಮ, ಪಾರ್ವತಿ ಸುರೇಶ ಗುತ್ತೆದಾರ, ಯಂಕಪ್ಪ ನಾಯಕ ಇದ್ದರು.ನಮ್ಮ ಸುದ್ದಿ ಮನವಿ, ಪ್ರಜಾಪ್ರಭುತ್ವ ಎನ್ನುವುದು ಆಡಳಿತ ವ್ಯವಸ್ಥೆ ಅಷ್ಟೇ ಅಲ್ಲ,ಅದು ಜನರ ಧ್ವನಿ , ಆ ಧ್ವನಿಗೆ ಶಕ್ತಿಯೇ ನಮ ಮತ,ಪ್ರಜಾಪ್ರಭುತ್ವದಲ್ಲಿ ಮತದಾನವು ಬಂದೂಕಿನ ಗುಂಡಿನ ವೇಗಕ್ಕಿಂತಲೂ ಮತದಾನದ ಶಕ್ತಿ ದೊಡ್ಡದು ಎಂದು ರಾಜಕೀಯ ಚಿಂತಕರ ಅಭಿಮತ,ಅದಕ್ಕೆ ನಿಮ್ಮ ಮತ,ನಿಮ್ಮ ಹಕ್ಕು ಸರಿಯಾಗಿ ಕಾಪಾಡಿ.

## ಪೋಷಕರ ಶ್ರಮ ಅರಿತು, ಬಡತನದಲ್ಲೇ ಎಂಬಿಬಿಎಸ್ ಮುಗಿಸಿದ ಡಾ.ಎನ್.ಗೀತಾ : ಕಠಿಣ ಪರಿಶ್ರಮದಿಂದ ಎಂಬಿಬಿಎಸ್

❑ ನೈಜ್ಯ ದೆಸೆ ನ್ಯೂಸ್




**ಬಳ್ಳಾರಿ / ಕಂಪ್ಲಿಛ: ಕಂಪ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆ ಗೇಟ್ ಬಳಿ ಸಣ್ಣ ಹೋಟೆಲ್ ನಡೆಸುತ್ತಿರುವ ದಂಪತಿಗಳ ಮಗಳಾದ ಡಾ.ಎನ್. ಗೀತಾ ಅವರು ಬಡತನವನ್ನು ಮೆಟ್ಟಿ ನಿಂತು ಎಂಬಿಬಿಎಸ್ ಮುಗಿಸಿ, ಉನ್ನತ ಸಾಧನೆಯೊಂದಿಗೆ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪೋಷಕರ ನಿತ್ಯದ ಕಷ್ಟವನ್ನು ಕಂಡು ಸ್ಫೂರ್ತಿ ಪಡೆದ ಅವರು,**

ತಮ್ಮ ವಿದ್ಯಾಭ್ಯಾಸವನ್ನು ಅದ್ವಿತೀಯವಾಗಿ ಪೂರೈಸಿದ್ದಾರೆ. ಗೀತಾ ಅವರ ಪೋಷಕರಾದ ಸರಸ್ವತಿ ಮತ್ತು ವೆಂಕಟೇಶ ಅವರು ಕಂಪ್ಲಿಯಲ್ಲಿ ಸಣ್ಣ ಹೋಟೆಲ್ ನಡೆಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ತಮ್ಮ ಹೆತ್ತವರು ಹೋಟೆಲ್‌ನಲ್ಲಿ ಪಡುತ್ತಿರುವ ಕಷ್ಟವನ್ನು ಹತ್ತಿರದಿಂದ ನೋಡಿದ ಗೀತಾ, ಉನ್ನತ ಶಿಕ್ಷಣ ಪಡೆದು ಪೋಷಕರಿಗೆ ಹೆಮ್ಮೆ ತರುವ ಛಲ ತೊಟ್ಟರು. ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಕಂಪ್ಲಿ ಪಟ್ಟಣದಲ್ಲೇ ಪೂರೈಸಿ, ನಂತರ ವೈದ್ಯಕೀಯ ಶಿಕ್ಷಣದ ಕಡೆಗೆ ಗಮನ ಹರಿಸಿದರು. ಬಡತನವನ್ನು ಲೆಕ್ಕಿಸದೆ ಕಠಿಣ ಪರಿಶ್ರಮದಿಂದ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿ, ಡಾಕ್ಟರೇಟ್ ಪದವಿ ಮುಗಿಸುವ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ.

ವಿದ್ಯೆಗೆ ಬಡತನ ಅಡ್ಡಿ ಇಲ್ಲ ಎಂಬಂತೆ ಇಲ್ಲಿನ ವಿದ್ಯಾರ್ಥಿನಿ ತನ್ನ ಬಡವನವನ್ನೇ ಮೆಟ್ಟಿ ಶಿಕ್ಷಣ ಎಂಬ ರಂಗದಲ್ಲಿ ಅದ್ವಿತೀಯ ಸಾಧನೆಯೊಂದಿಗೆ ಡಾಕ್ಟರ್‌ರೇಟ್ ಪದವಿಯನ್ನು ರಾಯಚೂರು ನಗರದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ವಿಮ್ಸ್)ಯಲ್ಲಿ ಮುಗಿಸಿದ್ದಾಳೆ. ಹೌದು...! ಕಂಪ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಗೇಟ್ ಬಳಿಯಲ್ಲಿ ಜೀವನದುದ್ದಕ್ಕೂ ಸಣ್ಣ ಹೋಟಲ್‌ನಲ್ಲೇ ಜೀವನ ಕಳೆಯುತ್ತಿರುವ ಸರಸ್ವತಿ ವೆಂಕಟೇಶ ದಂಪತಿಯ ಪುತ್ರಿ ಡಾ.ಎನ್.ಗೀತಾ ಎಂಬಿಬಿಎಸ್ ಮುಗಿಸಿ, ಇನ್ನೇನು ಪೋಷಕರು ಕನನು ನನಸು ಮಾಡಿದ್ದಾಳೆ. ನಮಗೆ ಏನೇ ಕಷ್ಟ ಬಂದರೂ ಮಕ್ಕಳಿಗೆ ಉನ್ನತ ಮಟ್ಟದಲ್ಲಿ ಶಿಕ್ಷಣ ಕೊಡಿಸಬೇಕೆಂಬ ಹಂಬಲದಿಂದ ಇಲ್ಲಿನ ಕಿರು ಹೋಟಲ್ ನಡೆಸಿಕೊಂಡು ಮಗಳಿಗೆ ಉನ್ನತ ಮಟ್ಟದ ಶಿಕ್ಷಣ ಕೊಡಿಸಿರುವುದು ಮಾದರಿಯಾಗಿದೆ. ದಿನದಿನತ್ಯದ ಕಷ್ಟ : ನಮ್ಮ ಪೋಷಕರು ದಿನನಿತ್ಯ ಹೋಟಲ್‌ನಲ್ಲಿ ಮಾಡುತ್ತಿರುವ ಕಷ್ಟವನ್ನು ನೋಡಿ, ಹೇಗಾದರೂ ಮಾಡಿ, ನಾನು ಒಳ್ಳೆಯ ಶಿಕ್ಷಣ ಪಡೆದು, ಪೋಷಕರಿಗೆ ಒಂದೊಳ್ಳೆ ಹೆಸರು ತರಬೇಕೆಂಬ ನಿಟ್ಟಿನಲ್ಲಿ ಕಂಪ್ಲಿ ಪಟ್ಟಣದಲ್ಲಿ ಪಾಥಮಿಕ,

ಹಿರಿಯ ಪ್ರೌಢಶಾಲಾ ಶಿಕ್ಷಣವನ್ನು ಉತ್ತಮ ಮಟ್ಟದಲ್ಲಿ ಸಾಧನೆ ಪಡೆದಿದ್ದಾಳೆ.

> **ನಮ್ಮ ಪೋಷಕರು ಫುಟ್‌ಬಾತ್‌ನಲ್ಲಿ ಸಣ್ಣದೊಂದು ಹೋಟಲ್ ಇಟ್ಟುಕೊಂಡು, ಇಲ್ಲಿತನದ ಓದಲು ಸಾಕಷ್ಟು ಅನುವು ಮಾಡಿಕೊಟ್ಟಿದ್ದಾರೆ. ಅವರ ಕಷ್ಟಗಳನ್ನು ಅರಿತು, ಹೇಗಾದರೂ ಮಾಡಿ ನಾನು ವೈದ್ಯೆಯಾಗಬೇಕೆಂಬ ಕನಸಿನೊಂದಿಗೆ ನಿರಂತರವಾಗಿ ಓದಿನ ಕಡೆಗೆ ಹೆಚ್ಚು ಒತ್ತು ನೀಡಿದ್ದೇನೆ. ಇದರಿಂದ ಈಗ ಎಂಬಿಬಿಎಸ್ ಮುಗಿಸಲು ಸಾಧ್ಯವಾಗಿದೆ. ಇನ್ನೇನು ವೈದ್ಯಳಾಗಿ ಜನರ ಸೇವೆ ಮಾಡುತ್ತೇನೆ.**
> **ಡಾ.ಎನ್.ಗೀತಾ, ಎಂಬಿಬಿಎಸ್, ವಿದ್ಯಾರ್ಥಿನಿ, ಕಂಪ್ಲಿ.**

ನಂತರ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಕಂಪ್ಲಿ ನಗರ ಚೇತನವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಮುಗಿಸುವ ಮೂಲಕ ಎಸ್ಸೆಸ್ಸೆಲ್ಸಿಯಲ್ಲಿ ಶೇ.98% ರಷ್ಟು ಫಲಿತಾಂಶದ ಸಾಧನೆ ತನ್ನದಾಗಿಸಿಕೊಂಡಿದ್ದಾಳೆ. ತದನಂತರ ಬಳ್ಳಾರಿಯ ಶ್ರೀಚೈತನ್ಯ ಕಾಲೇಜಿನಲ್ಲಿ ದ್ವಿತೀಯ ವ್ಯಾಸಾಂಗದಲ್ಲಿ ಶೇ.92ರಷ್ಟು ಅಂಕ ಪಡೆದುಕೊಂಡಿದ್ದಾಳೆ. ನಂತರ ಓದಿನಲ್ಲಿನ ನಿರಂತರ ಪರಿಶ್ರಮದಿಂದ ನೀಟ್ ಪರೀಕ್ಷೆಯಲ್ಲಿ 528 ಅಂಕಗಳೊಂದಿಗೆ ಎಂಬಿಬಿಎಸ್ ಸೀಟ್‌ಗೆ ಆಯ್ಕೆಗೊಂಡಿದ್ದಾಳೆ. ಈಗ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿ ವೈದ್ಯರಾಗಿದ್ದಾರೆ. ತಮ್ಮ ಕನಸಿನಂತೆ ಶಿಕ್ಷಕರ, ಉಪನ್ಯಾಸಕರ ಪಾಠ, ಪ್ರವಚನದ ಜೊತೆಗೆ ನಿರಂತರ ಓದಿನಿಂದಾಗಿ ಇಂದು ಡಾಕ್ಟರೇಟ್ ಪದವಿ ಮುಗಿಸುವ ಕನಸು ನನಸು ಮಾಡಿದ ಸಾಧನೆ ಗೀತಾಳದ್ದಾಗಿದೆ.

1ನೇ ಪುಟದಿಂದ....

**ಪ್ರಗತಿಪರ ಸಂಘಟನೆಗಳಿಂದ ಸರ್ಕಾರಕ್ಕೆ ಹಕ್ಕೋತ್ತಾಯಗಳು: ಲೈಂಗಿಕ ದೌರ್ಜನ್ಯ ಎಸಗಿದ ತಪ್ಪಿಸ್ಥನಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಹಾಗೂ ಭದ್ರತೆ ರಕ್ಷಣೆ ಒದಗಿಸಬೇಕು. ಬಾಧಿತ ಮಕ್ಕಳನ್ನು ಉಚಿತ ವಸತಿ ಸಹಿತ ಶಾಲೆಗೆ ಸೇರ್ಪಡೆ ಮಾಡಿ, ಒದುವವರಿಗೂ ಗುಣಮಟ್ಟದ ಶಿಕ್ಷಣವನ್ನು ಸರ್ಕಾರವೇ ಒದಗಿಸಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಸಂಬಂಧಿಸಿದ ಇಲಾಖೆಗಳು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.**

ಮಕ್ಕಳು, ಮಹಿಳೆಯರು, ಯುವತಿಯರ ರಕ್ಷಣೆಗೆ ನಿರ್ಭಯಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಗೊಳಿಸಬೇಕು. ಕೂಲಿಕಾರರು ಹಾಗೂ ಬಡ ಕುಟುಂಬದ ಮಕ್ಕಳ ರಕ್ಷಣೆ ಮತ್ತು ಭದ್ರತೆ ಹಿನ್ನೆಲೆ ಅಂಗನವಾಡಿ ಮಾದರಿಯಲ್ಲಿ ಸುರಕ್ಷಾ ಕೇಂದ್ರಗಳನ್ನು ಆರಂಭಿಸಬೇಕು. ವಿದ್ಯಾರ್ಥಿನಿಯರಿಗೆ ಪುಂಡ ಪೋಕರಿಗಳ ಕಿರುಕುಳದಿಂದ ಸೂಕ್ತ ರಕ್ಷಣೆ ನೀಡಿ, ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಚಿತ್ರಗಳ ಪ್ರದರ್ಶನ ನಿರ್ಬಂಧಿಸಲೇಬೇಕು. ಸಿಂಧನೂರಿನಲ್ಲಿ ರೋಡ್ ರೋಮಿಯೋ ನಿಯಂತ್ರಣ ಪಡೆ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂಬ ಹಕ್ಕೋತ್ತಾಯ ಮಾಡಿದರು. ಈ ಸಂದರ್ಭದಲ್ಲಿ: ಎಸ್.ದೇವೇಂದ್ರಗೌಡ, ಬಸವರಾಜ ಬಾದರ್ಲಿ, ಬಸವಂತರಾಯಗೌಡ ಕಲ್ಲೂರು, ಬಿ.ಎನ್. ಯರದಿಹಾಳ, ಅಬ್ದುಲ್ ಸಮದ್ ಚೌದ್ರಿ, ಹುಸೇನ್ ಸಾಬ್, ವೆಂಕನಗೌಡ ಗದ್ರಟಗಿ, ಗಿರಿಜಾ ಕಲ್ಲೇದ್, ಚಂದ್ರೇಗೌಡ ಹರಟೇನೂರು, ಲಕ್ಷ್ಮಿ ಪಾಟೀಲ್, ಬಸವಲಿಂಗಪ್ಪ ಬಾದರ್ಲಿ, ಮಂಜುನಾಥ ಗಾಂಧಿನಗರ, ಹಾಜಿ ಮಸ್ತಾನ್ ಜಾಗೀರದಾರ್, ಅಬುಲೇಶ ನಾಯಕ, ಶರಣೇಗೌಡ ಗಿಣಿವಾರ, ಲುಬನಾ ಬೇಗಂ, ಸೇರಿದಂತೆ ಅನೇಕ ಪ್ರಗತಿಪರ ಸಂಘಟನೆಗಳ ಮುಖಂಡರು, ಹತ್ತಾರು ಕಾಲೇಜುಗಳ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರಕ್ಕೆ ಒತ್ತಾಯ ಮಾಡಿದರು.

# "ಸಂತೆಕಲ್ಲೂರಲ್ಲಿ ಎಸ್‌ಐಆರ್ ಕುರಿತು ವಿಶೇಷ ಸಭೆ"

## ಮಸ್ಕಿ ಕ್ಷೇತ್ರದಲ್ಲಿ ಕಾಂಗ್ರೆಸ್ ಆಡಳಿತ ಬಂದ ಮೇಲೆ ಅಕ್ರಮ ಚಟುವಟಿಕೆ ಜಾಸ್ತಿಯಾಗಿವೆ.

❑ ನೈಜ್ಯ ದೆಸೆ ನ್ಯೂಸ್



**ಮಸ್ಕಿ: ತಾಲೂಕಿನ ಸಂತೆಕೇಲ್ಲೂರಲ್ಲಿ ವಿಶೇಷ ಮತ ಪಟ್ಟಿ ಪರಿಷ್ಕರಣೆ ಕುರಿತು ಸಭೆ ಬಡೆಯಿತು. ಈ ಸಭೆಗೆ ಚಾಲನೆ ನೀಡಿ ಮಾಜಿ ಶಾಸಕರಾದ ಪ್ರತಾಪ್ ಗೌಡ ಪಾಟೀಲ್ ಮಾತನಾಡಡಿದರು. ಕಾಂಗ್ರೆಸ್ ಆಡಳಿತ ಬಂದ ಮೇಲೆ ಈ ಕ್ಷೇತ್ರದಲ್ಲಿ ಇಸ್ಪೇಟ್ ಕ್ಲಬ್, ಅಕ್ರಮ ಮದ್ಯ ಅಂಗಡಿಗಳು, ಒಸಿ ಕ್ಲಬ್ ಹೆಚ್ಚಾಗಿವೆ ಎಂದು ಆರೋಪ ಮಾಡಿದರು.**

ಯಾವ್ಯಾವ ಊರಲ್ಲಿ ಆಗಿವೆ ಎಲ್ಲರಿಗೂ ಗೊತ್ತು ಇವತ್ತು ಯುವಕರ ಪರಿಸ್ಥಿತಿ ಏನಾಗೈತೆ ಅರ್ಥ ಮಾಡಿಕೊಳ್ಳಬೇಕು. ಗಾಂಜಾ ನಮ್ಮ ಮಸ್ಕಿಗೆ ಲಗ್ಗೆ ಇಟ್ಟು ಅದರಿಂದ ಯುವಕರು ಹಾಳಾಗುತ್ತಿರುವ ಇಷ್ಟು ಒಂದು ದೊಡ್ಡ ಆಪಾಯ ಪೊಲೀಸ್ ಇಲಾಖೆಗೆ ಗೊತ್ತಿದ್ದರೂ ಪೊಲೀಸರು ಅಸಹಾಯಕರಾಗಿದ್ದಾರೆ. ಅವರಿಗೆ ತಮಗೆ ಬಂದಷ್ಟು ವೇತನ ಬರುತ್ತೆ ಬೇರೆ ವಿಷಯ ಯಾಕೆ ಎಂದು ಸುಮ್ಮನಿದ್ದಾರೆ. ಇಲ್ಲಿಗೆ ಅಧಿಕಾರಿಗಳಾಗಿ ಬರಬೇಕಾದರೆ ಲಕ್ಷಗಟ್ಟಲೆ ಹಣ ಸುರಿಬೇಕಾಗಿದ್ದು ಆಶ್ಚರ್ಯ ಆಗುತ್ತದೆ. ಒಬ್ಬ ಡಿಎಸ್ಪಿ 1 ಕೋಟಿ, ಸರ್ಕಲ್ ಇನ್ಸೆಕ್ಟರ್ 25 ರಿಂದ 30 ಲಕ್ಷ, ಸಬ್ ಇನ್ಸೆಕ್ಟರ್ 15 ರಿಂದ 20 ಲಕ್ಷ ಇಷ್ಟೊಂದು ಹಣ ಕೊಟ್ಟು ಬರುವ ಅವರು ಇದನ್ನ ಲೂಟಿ ಮಾಡಬೇಕಲ್ಲ ಅದಕ್ಕೆ ಅಕ್ರಮ ಮರಳು ಮಾಫಿಯಾ, ಕ್ಲಬಗಳಿಗೆ ಸಹಕಾರ ನೀಡುತ್ತಾರೆ. ಜನಸಾಮಾನ್ಯರು ಒಂದು ಟ್ರಾಕ್ಟರ್ ಮರಳು ಅಥವಾ ಮಣ್ಣು ಸಾಗಾಟ ಮಾಡಿದರೆ ಕೇಸ್ ಹಾಕುವ ಅಧಿಕಾರಿಗಳು ಪ್ರಭಾವಿಗಳು ಏನೇ ಮಾಡಿದರರೂ ಸಾಬೂಬು ನೀಡಿ ಕೈತೋಳೆದು ಕೊಳ್ಳುತ್ತಾರೆ ಎಂದು ಆರೋಪ ಮಾಡಿದರು.

ಮುಂದುವರೆದು ಹತ್ತಾರು ಜೆಸಿಬಿ, ಟಿಪ್ಪರ್, ಟ್ರಾಕ್ಟರ್ ಬಳಸಿಕೊಂಡು ಅಕ್ರಮ ಮರಳು ಗಣಿಗಾರಿಕೆ ಸೇರಿ ಇತರ ಎಲ್ಲಾ ಅಕ್ರಮಗಳನ್ನು ಇವತ್ತು ನಮ್ಮ ಕಾರ್ಯಕರ್ತರು ಜನರಿಗೆ ಮನವರಿಕೆ ಮಾಡಬೇಕು. ನಂದವಾಡಿಗೆ ಏತ ನೀರಾವರಿಗೆ ಕಷ್ಟಪಟ್ಟು ಹೋರಾಟ ಮಾಡಿದ್ದರೂ, ಇವತ್ತು 90% ಕೆಲಸ ಆಗಿ ಇನ್ನ ನೀರು ಕೊಡಲು ಆಗಿಲ್ಲದ ಕುರಿತು ಜನ ಸಾಮಾನ್ಯರಿಗೆ ಮನವರಿಕೆ ಮಾಡಬೇಕು. ಅವಾಗ ಪಕ್ಷ ಸಂಘಟನೆ ಮಾಡಕ್ಕೆ ಸಾಧ್ಯ ಆಗುತ್ತೆ ಆ ನಿಟ್ಟಿನಲ್ಲಿ ಇವತ್ತು ನಮ್ಮೆಲ್ಲಾ ಕಾರ್ಯಕರ್ತ ಇದನ್ನು ಮಾಡಬೇಕು ಎಂದು ತಿಳಿಸಿದರು. ಮತ ಪಟ್ಟಿ ಪರಿಷ್ಕರಣೆಯ ಕೆಲಸ ಒಂದು ತಿಂಗಳು ನಡೆಯುವ ಕಾರಣ ನಮ್ಮ ಬಿಎಲ್‌ಎ-2 ಮತ್ತು ಅಲ್ಲಿರುವಂತ ಭೂತ ಅಧ್ಯಕ್ಷರು ಒಬ್ಬ ಮಹಿಳಾ ಸದಸ್ಯ ಹಾಗೂ ಇನ್ನೊಬ್ಬರನ್ನು ಸೇರಿಸಿಕೊಂಡು ಮುಖಂಡರು ಎಲ್ಲಾ ವಾರ್ಡಿಗೆ ಅಧಿಕಾರಿಗಳೊಂದಿಗೆ ಸಹಕರಿಸಿ ಕೆಲಸ ಮಾಡಿದರೆ ಚೊಕ್ಕದಾಗಿರುವಂತ ಮತ ಪಟ್ಟಿ ತಯಾರಾಗುತ್ತದೆ. ಇಂತಹ ಕಾರ್ಯದಲ್ಲಿ ಎಲ್ಲರೂ ಸಹಕಾರದಿಂದ ಕೈಜೋಡಿಸಬೇಕೆಂದು ತಿಳುವಳಿಕೆ ಹೇಳಿದರು.

ಈ ಸಂದರ್ಭದಲ್ಲಿ ಮಸ್ಕಿ ಕ್ಷೇತ್ರದ ಜನಪ್ರಿಯ ನಾಯಕರು ಮಾಜಿ ಶಾಸಕರಾದ ಶ್ರೀ ಪ್ರತಾಪ್ ಗೌಡ ಪಾಟೀಲ್ ಅವರು ಪಕ್ಷದ ಮುಖಂಡರು ಬಸವಂತರ ಕುರಿ ಸರ್ ಸಿದ್ರಾಮಪ್ಪ ಸಾಹುಕಾರ್ ಸಂತೆಕೆಲ್ಲೂರು ಮಲ್ಲೇಶ್ ಗೌಡ ಮಟ್ಟೂರ್ ಬಸವರಾಜು ಪಾಟೀಲ್ ಬಸವರಾಜ್ ಗುಡಿಹಾಳ ಅಮರಗುಂಡಪ್ಪ ಮಿಟೆಕೆಲ್ಲೂರು ಬಸವರಾಜ್ ಇಲಕಲ್ ಅಮರ ಗುಂಡಪ್ಪ ಗೊನ್ವಾರ್ ಡಾ. ದೇವಣ್ಣ ಕಾಟ್ಗಲ್ ರಮೇಶ್ ಭಂಡಾರಿ ರಮೇಶ ಶಾಸ್ತ್ರಿ ಶೇರ್ ಪಾಶ ಮಂಜುನಾಥ್ ಪಕ್ಷದ ಪಕ್ಷದ ಮುಖಂಡರು ಪಕ್ಷದ ಪದಾಧಿಕಾರಿಗಳು ಬೂತನ ಅಧ್ಯಕ್ಷರು ಹಾಗೂ ಃಐಂ-2 ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಉಪಸ್ಥಿತಿ ಇದ್ದರು.

## ಕಂಪ್ಲಿಯಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್



**ಬಳ್ಳಾರಿ / ಕಂಪ್ಲಿ : ರಾಜ್ಯದ್ಯಂತ ಇಂದಿನಿಂದ ಆರಂಭವಗೊಂಡ ಮತದಾರರ ವಿಶೇಷ ಮತದಾರರ ಪರಿಷ್ಕರಣೆ ಕಾರ್ಯಕ್ಕೆ ಕಂಪ್ಲಿ ಪಟ್ಟಣದಲ್ಲಿ ಪುರಸಭೆ ಪ್ರಭಾರಿ ಮುಖ್ಯ ಅಧಿಕಾರಿ ಬಿ ಮಲ್ಲಿಕಾರ್ಜುನ ಇಲ್ಲಿನ ಕೋಟೆಯ ಮತದಾರರಿಗೆ ಎಸ್‌ಐಆರ್ ಫಾರಂ ಗಳನ್ನು ವಿತರಿಸುವ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿ,**

ಮತದಾರರ ಪಟ್ಟಿಯನ್ನು ಪರಿಷ್ಕರಿಸಿ, ದೋಷಗಳನ್ನು ಸರಿಪಡಿಸಲು ಭಾರತೀಯ ಚುನಾವಣಾ ಆಯೋಗವು ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (SIR) ಪ್ರಕ್ರಿಯೆಗೆ ಚಾಲನೆ ನೀಡಿದೆ. ಈ ಮಹತ್ವದ ಕಾರ್ಯದ ಅಡಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಮೃತಪಟ್ಟವರು, ಸ್ಥಳಾಂತರಗೊಂಡವರು ಅಥವಾ ನಕಲಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕುವುದು ಮತ್ತು ಹೊಸ ಮತದಾರರನ್ನು ಸೇರಿಸುವುದು. ನೇಮಕಗೊಂಡ ಸಿಬ್ಬಂದಿಗಳು ಮನೆಗಳಿಗೆ ತೆರಳಿ ಎನ್ಯುಮರೇಶನ್ ಫಾರಂಗಳನ್ನು ಭರ್ತಿ ಮಾಡಿಸಿಕೊಳ್ಳುತ್ತಿದ್ದಾರೆ. ಈ ಪ್ರಕ್ರಿಯೆಯ ಬಗ್ಗೆ ಜನರು ಆತಂಕಪಡುವ ಅಗತ್ಯವಿಲ್ಲ. ಅರ್ಹ ಮತದಾರರು ತಮ್ಮ ಗುರುತಿನ ಚೀಟಿ ಮಾಹಿತಿ ನೀಡಿ, ಮತದಾರರು ತಾವೇ ತಮ್ಮ ಕೈಯಾರೆ ಫಾರಂ ಗಳನ್ನು ಭರ್ತಿ ಮಾಡಿ, ಪರಿಶೀಲಿಸಿ ಸ್ವೀಕರಿಸಲಿದ್ದಾರೆ ಪ್ರಜಾಪ್ರಭುತ್ವದ ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಮತದಾರರಾದ ತಾಳೂರು ಜಮೀರ್, ಸಂಡೂರು ಶರ್ಮಸ್ ವಲಿ ಸೇರಿದಂತೆ ಇತರರಿದ್ದರು.

## ಹಿರಿಯರ ಮದುವೆಯನ್ನೇ ಮೀರಿಸಿದ ಪುಟಾಣಿಗಳ ಕಲ್ಯಾಣ! ಬಳಗಾನೂರಿನ ಕಾರಹುಣ್ಣಿಮೆ ಕರಿ ಸಂಭ್ರಮಕ್ಕೆ ಜನ ಫಿದಾ!

❑ ನೈಜ್ಯ ದೆಸೆ ನ್ಯೂಸ್



**ಬಳಗಾನೂರು: ಸಂಪ್ರದಾಯಗಳು ಪುಸ್ತಕಗಳಲ್ಲಲ್ಲ, ಜನರ ಬದುಕಿನಲ್ಲಿ ಜೀವಂತವಾಗಿರಬೇಕು ಎಂಬುದನ್ನು ಬಳಗಾನೂರು ಪಟ್ಟಣದ ಹತ್ತನೇ ವಾರ್ಡ್‌ನ ಮಹಿಳೆಯರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಕಾರಹುಣ್ಣಿಮೆ ಕರಿ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಮಹಿಳೆಯರು ಹಾಗೂ ಮಕ್ಕಳು ಸೇರಿ ಈರಣ್ಣ ದೇವಸ್ಥಾನದ ಮುಂಭಾಗದಲ್ಲಿ ಪುಟಾಣಿಗಳನ್ನು ವಧು-ವರರನ್ನಾಗಿ ಅಲಂಕರಿಸಿ, ನಿಜವಾದ ವಿವಾಹದ ಎಲ್ಲ ಶಾಸ್ತ್ರೋಕ್ತ ವಿಧಿವಿಧಾನಗಳೊಂದಿಗೆ ಅದ್ದೂರಿಯಾಗಿ ಮದುವೆ ನೆರವೇರಿಸಿದರು.**

ಮದುವೆಗೂ ಮುನ್ನ ವಧು-ವರರಿಗೆ ಅರಿಶಿಣ ಹಚ್ಚುವುದು,ತಾಳಿ ಕಟ್ಟಿಸುವುದು,ಮುತ್ತು ಹುಡುಕುವ ಶಾಸ್ತ್ರ, ಅರುಂಧತಿ ನಕ್ಷತ್ರ ತೋರಿಸುವುದು ಸೇರಿದಂತೆ ಪ್ರತಿಯೊಂದು ವಿಧಿವಿಧಾನವನ್ನು ಅತ್ಯಂತ ಸಂಭ್ರಮದಿಂದ ನೆರವೇರಿಸುವ ಮೂಲಕ ಹಿರಿಯರ ವಿವಾಹದ ದೃಶ್ಯವನ್ನೇ ಮರುಸೃಷ್ಟಿ ಮಾಡಿದರು.ಮದುವೆಯ ಸಂಭ್ರಮವನ್ನು ಮತ್ತಷ್ಟು ರಂಗೇರಿಸಿದ ಮಕ್ಕಳು ಸಿಕ್ಕಸಿಕ್ಕ ಡಬ್ಬಿ, ತಾಟು, ಗಂಗಾಳ, ತಂಬಿಗೆಗಳನ್ನು ಬಾರಿಸುತ್ತಾ ಸಂಭ್ರಮದ ವಾತಾವರಣ ನಿರ್ಮಿಸಿದರು.

ಅವರ ಉತ್ಸಾಹ ಮತ್ತು ಕಿಲಕಿಲ ನಗು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು.ಬಳಿಕ ನೆರೆದಿದ್ದ ಮಹಿಳೆಯರು ಹಾಗೂ ಮಕ್ಕಳಿಗೆ ಫಲಾವ್ ಊಟದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರೂ ಒಂದಾಗಿ ಕಾರಹುಣ್ಣಿಮೆ ಕರಿಯನ್ನು ಸಂತಸದಿಂದ ಆಚರಿಸಿದರು.ಈ ಸಂದರ್ಭದಲ್ಲಿ ಹತ್ತನೇ ವಾರ್ಡ್ ಸೇರಿದಂತೆ ಪಕ್ಕದ ಓಣಿಗಳ ಮಹಿಳೆಯರು, ಹಿರಿಯರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಂಭ್ರಮದಲ್ಲಿ ಪಾಲ್ಗೊಂಡರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಹೆಲ್ತ್ ಸ್ಯಾನಿಟರಿ ಇನ್ಸ್‌ಪೆಕ್ಟರ್''

ಹೆಲ್ತ್ ಸ್ಯಾನಿಟರಿ ಇನ್ಸ್‌ಪೆಕ್ಟರ್'' (Health Sanitary Inspector) ವೃತ್ತಿಯ ಒಂದು ವರ್ಷದ ತರಬೇತಿ ಅವಧಿಯಲ್ಲಿ, ಅಭ್ಯರ್ಥಿಗೆ ಉದ್ಯೋಗ ಸಂಬಂಧಿತ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ಕುರಿತು ತರಬೇತಿ ನೀಡಲಾಗುತ್ತದೆ. ಇದಲ್ಲದೆ, ಆತ್ಮವಿಶ್ವಾಸವನ್ನು ವೃದ್ಧಿಸುವ ಉದ್ದೇಶದಿಂದ ಯೋಜನಾ ಕಾರ್ಯಗಳು, ಪಠ್ಯೇತರ ಚಟುವಟಿಕೆಗಳು ಹಾಗೂ ಕಾರ್ಯಕ್ಷೇತ್ರದಲ್ಲಿನ ತರಬೇತಿ (On-the-Job Training) ನೀಡಲಾಗುತ್ತದೆ.

ವೃತ್ತಿಪರ ಕೌಶಲ್ಯ ವಿಷಯದಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು ಹೀಗಿವೆ:

ಕೋರ್ಸ್ ಪೂರ್ಣಗೊಂಡ ನಂತರ ತರಬೇತಿದಾರರು ವಿವಿಧ ವಯೋಮಾನದವರಿಗಾಗಿ ಅಗತ್ಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಪೌಷ್ಟಿಕಾಂಶ ಯೋಜನೆಗಳನ್ನು ರೂಪಿಸಲು, ಸಮತೋಲನ ಆಹಾರವನ್ನು ವಿನ್ಯಾಸಗೊಳಿಸಲು ಹಾಗೂ ವ್ಯಕ್ತಿಯ ಅಗತ್ಯಕ್ಕೆ ಅನುಗುಣವಾಗಿ ಕ್ಯಾಲೊರಿ ಮತ್ತು ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಲೆಕ್ಕ ಹಾಕಿ ಸಲಹೆ ನೀಡಲು ಸಮರ್ಥರಾಗುತ್ತಾರೆ. ವಿವಿಧ ಪೋಷಕಾಂಶಗಳ ಕೊರತೆಯಿಂದ ಉಂಟಾಗುವ ರೋಗಗಳನ್ನು ಗುರುತಿಸಬಹುದು.

ಅವರು ರೋಗಗಳ ಲಕ್ಷಣಗಳನ್ನು ಪರಿಶೀಲಿಸಿ, ಆಹಾರ ಕಲಬೆರಕೆಯನ್ನು ಪತ್ತೆಹಚ್ಚಿ ವರದಿ ಮಾಡಬಹುದು ಹಾಗೂ ವಿವಿಧ ಆಹಾರ ಪದಾರ್ಥಗಳಿಗೆ ಸೂಕ್ತವಾದ ಆಹಾರ ಸಂರಕ್ಷಣಾ ವಿಧಾನಗಳನ್ನು ಸೂಚಿಸಬಹುದು. ನೀರು ಮತ್ತು ಅದರ ಗುಣಲಕ್ಷಣಗಳು, ನೀರಿನ ಮಾಲಿನ್ಯದ ಕಾರಣಗಳನ್ನು ಅರ್ಥಮಾಡಿಕೊಳ್ಳಬಹುದು. ನಗರ ಹಾಗೂ ಗ್ರಾಮೀಣ ಪ್ರದೇಶಗಳ ನೀರು ಸರಬರಾಜು ಮತ್ತು ನೀರು ಶುದ್ಧೀಕರಣ ವ್ಯವಸ್ಥೆಗಳನ್ನು ವಿವರಿಸಬಹುದು. ನೀರಿನ ಸಂರಕ್ಷಣೆಗೆ ಕೊಳಾಯಿ (Plumbing) ವ್ಯವಸ್ಥೆಗಳನ್ನು ಅಳವಡಿಸುವುದು ಹಾಗೂ ಮಳೆನೀರು ಸಂಗ್ರಹಣೆ (Rainwater Harvesting) ತಂತ್ರಗಳನ್ನು ಅಭಿವೃದ್ಧಿಪಡಿಸಬಹುದು. ತರಬೇತಿದಾರರು ನೀರಿನ ಶುದ್ಧೀಕರಣ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡು, ಪರಿಸರ ಮತ್ತು ಮಾನವ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ನಗರ ಅಥವಾ ಪಟ್ಟಣಗಳ ಮಾನವ ಮಲಮೂತ್ರ (Night Soil) ನಿರ್ವಹಣೆಯನ್ನು ಕೈಗೊಳ್ಳಲು ಸಮರ್ಥರಾಗುತ್ತಾರೆ. ಒಂದು ಪ್ರದೇಶ ಅಥವಾ ಸಣ್ಣ ಪಟ್ಟಣಕ್ಕೆ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಯೋಜಿಸಬಹುದು.ಶೈಕ್ಷಣಿಕ ಅರ್ಹತೆ: ಸಾಮಾನ್ಯವಾಗಿ ೧೦ನೇ ತರಗತಿ (SSLC) ಉತ್ತೀರ್ಣರಾಗಿರಬೇಕು. ವಯೋಮಿತಿ: ಸಾಮಾನ್ಯವಾಗಿ ೧೮ ರಿಂದ ೪೦ ವರ್ಷಗಳೊಳಗಿನವರು ಅರ್ಜಿ ಸಲ್ಲಿಸಬಹುದು. (ಸಂಸ್ಥೆ ಮತ್ತು ಸರ್ಕಾರದ ನಿಯಮಗಳ ಪ್ರಕಾರ ವ್ಯತ್ಯಾಸ ಇರಬಹುದು.)

## ಮಸ್ಕಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಮಲ್ಲಯ್ಯ ಬಳ್ಳಾ ನೇಮಕಕ್ಕೆ ಒತ್ತಾಯ ಜನಪರ ನಾಯಕನಿಗೆ ಅವಕಾಶ ನೀಡುವಂತೆ ಶರಣಪ್ಪ ಗುಡಿಹಾಳ ಮನವಿ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಜನಪರ ಚಿಂತಕ, ಪ್ರಗತಿಪರ ಹೋರಾಟಗಾರ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಯ್ಯ ಬಳ್ಳಾ ಅವರನ್ನು ನೇಮಕ ಮಾಡಬೇಕು ಎಂದು ಶರಣಪ್ಪ ಹಿರೇಮನಿ ಗುಡಿಹಾಳ ಒತ್ತಾಯಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಆರ್. ಸಿದ್ದನಗೌಡ ತುರುವಿಹಾಳ ಅವರ ರಾಜೀನಾಮೆಯಿಂದ ತೆರವಾಗಿರುವ ಮಸ್ಕಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಪಕ್ಷನಿಷ್ಠೆ, ಪ್ರಾಮಾಣಿಕತೆ ಮತ್ತು ಜನಸೇವೆಯ ಮೂಲಕ ಗುರುತಿಸಿಕೊಂಡಿರುವ ಮಲ್ಲಯ್ಯ ಬಳ್ಳಾ ಅವ-ರಿಗೆ ಅವಕಾಶ ನೀಡಿದರೆ, ಪಕ್ಷಕ್ಕಾಗಿ ದುಡಿದ ಕಾರ್ಯಕರ್ತ-ರಿಗೆ ನ್ಯಾಯ ದೊರೆತಂತಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಜನಪರ ಚಿಂತನೆ, ಪ್ರಗತಿಪರ ಹೋರಾಟಗಳು ಹಾಗೂ ಪಕ್ಷದ ಸಂಘಟನೆಯಲ್ಲಿ ಮಲ್ಲಯ್ಯ ಬಳ್ಳಾ ಅವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಮಸ್ಕಿ ಕ್ಷೇತ್ರದ ಶಾಸಕರು ಅವರಿಗೆ ಅಧ್ಯಕ್ಷ ಸ್ಥಾನ ನೀಡುವ ಮೂಲಕ ಗೌರವಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.ಈ ಸಂಬಂಧ ಮಲ್ಲಯ್ಯ ಬಳ್ಳಾ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರ ಅಭಿಪ್ರಾಯವನ್ನೂ ಪಕ್ಷದ ನಾಯಕತ್ವ ಪರಿಗಣಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಶರಣಪ್ಪ ಹಿರೇಮನಿ ಗುಡಿಹಾಳ ಒತ್ತಾಯಿಸಿದ್ದಾರೆ.

ವರದಿ: ಸುರೇಶ ಬಳಗಾನೂರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಅಂಜುಮನ್-ಎ-ಇಸ್ಲಾಂ ಸಂಸ್ಥೆಯಿಂದ ಕಂಪ್ಯೂಟರ್ ತರಬೇತಿ ಕೇಂದ್ರ ಉದ್ಘಾಟನೆ

❑ ನೈಜ್ಯ ದೆಸೆ ನ್ಯೂಸ್

ಮುಧೋಳ: ನಗರದ ಅಂಜುಮನ್-ಎ-ಇಸ್ಲಾಂ ಸಂಸ್ಥೆಯ 2ನೇ ಮಹಡಿಯಲ್ಲಿ ನೂತನವಾಗಿ ನಿರ್ಮಿಸಲಾದ ಕಂಪ್ಯೂಟರ್ ತರಬೇತಿ ಕೇಂದ್ರ ಹಾಗೂ ಗ್ರಾಹಕರ ಸೇವಾ ಕೇಂದ್ರದ ಕಟ್ಟಡವು ಶನಿವಾರ ಅದ್ದೂರಿಯಾಗಿ ಉದ್ಘಾಟನೆಗೊಂಡಿತು.

ಮೌಲಾನಾ ಹುಸೇನ್ ತುಕಾನಟ್ಟಿ ಹಾಗೂ ಮೌಲಾನಾ ಸಜ್ಜಾದಅಹ್ಮದ ಖಾಜಿ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಜನಾಬ್ ಬಿಲಾಲ ಸಿಕಂದರ ಖಾನಧಾರ ವಕಿಲರು ವಹಿಸಿದ್ದರು. ಸಂಸ್ಥೆಯ ಹಿರಿಯ ಸದಸ್ಯರಾದ ಜನಾಬ್



ಇಸಾಕ ಎಚ್. ಅಂಬಿ ಹಿರಿಯ ನ್ಯಾಯವಾದಿ ಹಾಗೂ ಜನಾಬ್ ಅಮೀನಸಾಬ ಇಮಾಮಸಾಬ ಬೇಪಾರಿ ಅವರು ಜಂ-ಟಿಯಾಗಿ ಕೇಂದ್ರವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಾಗಲಕೋಟ ಜಿಲ್ಲಾ ವಕ್ಫ್ ಅಧಿಕಾರಿ ಮದಾರ ಎಮ್. ಪಟೇಲ ಮಾತನಾಡಿ, "ಯುವಕರಿಗೆ ಕಂಪ್ಯೂಟರ್ ಶಿಕ್ಷಣ ಅತ್ಯಗತ್ಯ. ಈ ಕೇಂದ್ರವು ಮುಧೋಳ ಭಾಗದ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ" ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಖಾಜಾಮಿನ ಬಾಗವಾನ , ಫಜಲಲಿ ಮೋಮಿನ, ಕೋಶಾಧಿಕಾರಿ ಬಾಬುಲಾಲ್

## ಮುಧೋಳದಲ್ಲಿ ನಗರಸಭೆ ಅಧಿಕಾರಿಗಳಿಂದ ಎನ್ಯೂಮರೇಷನ್ ಜಾಗೃತಿ ಅಭಿಯಾನ



❑ ನೈಜ್ಯ ದೆಸೆ ನ್ಯೂಸ್

ಮುಧೋಳ, ಬಾಗಲಕೋಟೆ ಜಿಲ್ಲೆ: ನಾಗ-ರಿಕ ಸೇವೆಗಳ ಸಮರ್ಪಕ ವಿತರಣೆ ಮತ್ತು ಸರ್ಕಾರಿ ಯೋಜನೆಗಳ ಫಲಾನುಭವಿಗಳ ನಿಖರ ಗುರುತಿಸುವಿಕೆಗಾಗಿ ಮುಧೋಳ ನಗರಸಭೆಯು ವಾರ್ಡ್ ನಂ. 2 ಜನತಾ ಪ್ಲಾಟ್ ಮತ್ತು ವಾರ್ಡ್ ನಂ. 5 ಕೋಟೆಗಲ್ಲಿಯಲ್ಲಿ ಎನ್ಯೂಮರೇಷನ್ ಫಾರ್ಮ್ ಮಾಹಿತಿ ಅಭಿಯಾನವನ್ನು ಹಮ್ಮಿಕೊಂಡಿತು.

ಮುಂದಾಳತ್ವ ವಹಿಸಿದ ಅಧಿಕಾರಿಗಳ ತಂಡ ಶಂಕರ್ ಮೆತ್ರೀ ಕಂದಾಯ ಅಧಿಕಾರಿ, ಮುಧೋಳ ನಗರಸಭೆ ಭಾರತಿ ಜೋಶಿ ಕಚೇರಿ ವ್ಯವಸ್ಥಾಪಕಿ ಮಂಗಳೇಶ ಪೂಜಾರ, ದ್ವಿತೀಯ ದರ್ಜೆ ಸಹಾಯಕ ಗಣೇಶ ಬುರುಡೆ ಸಿಬ್ಬಂದಿ ಎನ್.ವಿ. ನಾಯಕ, ಬೂತ್ ಮಟ್ಟದ ಅಧಿಕಾರಿ (ಬಿ.ಎಲ್.ಓ) ಕ್ಷೇತ್ರ ಕಾರ್ಯಾಚರಣೆ ಮಂಗಳವಾರ ಬೆಳಿಗ್ಗೆಯಿಂದ ಅಧಿಕಾರಿಗಳ ತಂಡವು ಕೋಟೆಗಲ್ಲಿಯ ಕಿರಿದಾದ ಗಲ್ಲಿಗಳಲ್ಲಿ ಮನೆ ಮನೆಗೆ ಭೇಟಿ ನೀಡಿತು. ನಿವಾಸಿಗಳನ್ನು ಖುದ್ದು ಭೇಟಿ ಮಾಡಿ ಎನ್ಯೂಮರೇಷನ್ ಫಾರ್ಮ್‌ನ ಉದ್ದೇಶ, ಭರ್ತಿ ಮಾಡುವ ಕ್ರಮ, ಸಲ್ಲಿಸಬೇಕಾದ ಪೂರಕ ದಾಖಲೆಗಳು ಹಾಗೂ ಕೊನೆಯ ದಿನಾಂಕದ ಕು-ರಿತು ವಿವರವಾದ ಮಾಹಿತಿ ನೀಡಲಾಯಿತು.

"ಪ್ರತಿಯೊಬ್ಬ ನಾಗರಿಕನೂ ಸರಿಯಾದ ಮಾಹಿತಿ ನೀಡಿದರೆ ಮಾತ್ರ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪುತ್ತವೆ. ಇದು ನಮ್ಮೆಲ್ಲರ ಜವಾಬ್ದಾರಿ" ಎಂದು ಕಂದಾಯ ಅಧಿಕಾರಿ ಶಂಕರ್ ಮೆತ್ರೀ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಸಾರ್ವಜನಿಕರ ಸ್ಪಂದನೆ: ಸ್ಥಳದಲ್ಲೇ ನಿವಾಸಿಗಳು ತಮ್ಮ ಗೊಂದಲಗಳನ್ನು, ಪ್ರಶ್ನೆಗಳನ್ನು ಅಧಿಕಾ-ರಿಗಳ ಮುಂದಿಟ್ಟರು. ಆಧಾರ್ ತಿದ್ದುಪಡಿ, ವಿಳಾಸ ಬದಲಾವಣೆ, ಕುಟುಂಬ ಸದಸ್ಯರ ಸೇರ್ಪಡೆ ಮುಂತಾದ ವಿಷಯಗಳ ಬಗ್ಗೆ ಅಧಿಕಾರಿಗಳು ಸ್ಪಷ್ಟನೆ ನೀಡಿದರು. ಫಾರ್ಮ್ ಭರ್ತಿ ಪ್ರಕ್ರಿಯೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಎಲ್ಲ ನಾಗರಿಕರು ಸಹಕ-ರಿಸಬೇಕು ಎಂದು ನಗರಸಭೆ ಕೋರಿದೆ. ಹೆಚ್ಚಿನ ಮಾಹಿತಿಗೆ ವಾರ್ಡ್‌ನ ಬಿ.ಎಲ್.ಓ ಅವರನ್ನು ಸಂಪರ್ಕಿಸಬಹುದು. ಎಂದು ತಿಳಿಸಿದರು.

## ಚಿತ್ರನಾಳ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟಕ್ಕೆ ಕಡಿವಾಣ ಹಾಕಿ : ಹನುಮಂತ ಬಡಿಗೇರ್ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ನೀರಲಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಚಿತ್ರನಾಳ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಬೇಕೆಂದು ಕರುನಾಡ ವಿಜಯಸೇನೆ ತಾಲೂಕು ಅಧ್ಯಕ್ಷ ಹನುಮಂತ ಬಡಿಗೇರ್ ಅಬಕಾರಿ ಇನ್ಸ್ಪೆಕ್ಟರ್ ಲಕ್ಷ್ಮೀದೇವಿ ಯವರಿಗೆ ಮನವಿಯನ್ನು ಸಲ್ಲಿಸಿದರು.

ಚಿತ್ರನಾಳ ಗ್ರಾಮದಲ್ಲಿ ಸರಕಾರಿ ಶಾಲೆಯ ಮುಂದೆ ಬಾಟಲಿ ಹಾಕುವುದು, ಸಾರಾಯಿ ಕುಡಿದು ಊರಲ್ಲಿ ಎಲ್ಲರಿಗೂ ಕೆಟ್ಟದಾಗಿ ಬೈಯುವುದು ಮಹಿಳೆಯರಿಗೆ, ಶಾಲಾ ಮಕ್ಕಳಿಗೆ ರಸ್ತೆಯಲ್ಲಿ ಹೋಗುವಾಗ ಕೆಟ್ಟದಾಗಿ ನೋಡುವುದು, ಗ್ರಾಮದಲ್ಲಿ ಹಿರಿಯ-ರಿಗೆ ಗೌರವ ಕೊಡದೆ ಬಡಿಯುವುದು ಹೊಡಿಯುವುದು ಹೆಚ್ಚಾಗಿದ್ದು , ಗ್ರಾಮದಲ್ಲಿ ಸಣ್ಣ ಸಣ್ಣ ಮಕ್ಕಳು ಸಾರಾಯಿ ಕುಡಿದು ಶಾಲೆಗೆ ಹೋಗುವುದು, ಶಾಲಾ ಶಿಕ್ಷಕರಿಗೆ ಬೈಯುವುದು, ಕುಡಿವುವಂತ ಯುವಕರು ಮನೆಯಲ್ಲಿ ಇದ್ದ




ಸಾಮಾನು ಅಡುಗೆ ಸಾಮಾನು ಕೊಡಪಾನ್, ಅಕ್ಕಿ, ಜೋಳ, ಸಜ್ಜೆ, ಅಡುಗೆ ಎಣ್ಣೆ, ಮತ್ತು ಕಾಳುಕಡಿಗಳನ್ನು ಸಾರಾಯಿ ಮಾರಾಟ ಮಾಡುವವರ ಮನೆಗೆ ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ಸಾರಾಯಿ ಕುಡಿದು ಬಂದು ಮನೆಯಲ್ಲಿ ಇರುವ ಮಕ್ಕಳಿಗೆ ಹಾಗೂ ಹೆಂಡತಿಯವರಿಗೆ ಬಡಿಯುವುದು ಹೊಡಿಯುವುದು ಮಾಡುತ್ತಿದ್ದಾರೆ.

ಚಿತ್ರನಾಳ ಗ್ರಾಮದ ಗ್ರಾಮಸ್ಥರು ಮತ್ತು ಮಹಿಳೆಯರು ಇಲಾಖೆಯ ಅಧಿಕಾ-ರಿಗಳ ಮೇಲೆ ಮತ್ತು ಅಕ್ರಮವಾಗಿ ಸಾರಾಯಿ ಮಾಡುವವರ ಮೇಲೆ ಗರಂ ಆದರು

ತಾಲೂಕಿನಲ್ಲಿ ವಿವಿಧ ಗ್ರಾಮಗಳಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದ ರಿಂದ ಗ್ರಾಮದಲ್ಲಿ ಎಷ್ಟೋ ಜನ ಮಹಿಳೆಯರು ಮತ್ತು ಮಕ್ಕಳು ಬೀದಿಗೆ ಬಂದಿರುವಂತ ಪರಿಸ್ಥಿತಿಯನ್ನು ನಿರ್ಮಾಣ ಆಗಿದೆ ಅಬಕಾರಿ ಇಲಾಖೆಯವರು ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದನ್ನು ಸಂಪೂರ್ಣ ಬಂದ ಮಾಡಬೇಕೆಂದು ಕರುನಾಡ ವಿಜಯಸೇನೆ ಸಂಘಟನೆ ಮತ್ತು ಗ್ರಾಮಸ್ಥರು ಒತ್ತಾಯಿಸಿದರು.

ಒಂದು ವೇಳೆ ಈ ನಮ್ಮ ಮನವಿಯನ್ನು ನಿರ್ಲಕ್ಷ್ಯ ತೋರಿದ್ದೆ ಆದ-ರೆ ತಮ್ಮ ಇಲಾಖೆಯ ಮುಂದೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಹೇಳಿದರು . ಈ ಸಂದರ್ಭದಲ್ಲಿ ದುರಗಪ್ಪ ಪೂಜಾರಿ, ರಾಮು ರಾಠೋಡ, ದ್ಯಾಮಮ್ಮ, ಬಸಮ್ಮ, ಇಂದ್ರಮ್ಮ, ಯಮನಮ್ಮ, ಹನುಮಮ್ಮ, ಯಮನಮ್ಮ, ಶಿವಮ್ಮ, ಶೇಖಮ್ಮ, ಶಶಿಕಲಾ, ಸಂಗಮ್ಮ, ದ್ಯಾಮಮ್ಮ, ನೀಲಮ್ಮ, ನಾಗಮ್ಮ, ಭಾಳಮ್ಮ, ಮಲ್ಲಪ್ಪ, ರಮೇಶ, ಹುಲಗಪ್ಪ, ಅಮರೇಶ, ಹಾಗೂ ಗ್ರಾಮದ ಯುವಕರು ಇದ್ದರು

## ಮರಳು ಗಣಿಗಾರಿಕೆ ಯೋಜನೆ ಕೈಬಿಡುವಂತೆ ಅಪರ ಜಿಲ್ಲಾಧಿಕಾರಿಗೆ ದಲಿತ ಸೇನೆ ಮನವಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೀಕಲಪರ್ವಿ ಗ್ರಾಮದ ಸಮೀಪ ತುಂಗಭದ್ರಾ ನದಿಪಾತ್ರದಲ್ಲಿ ಪ್ರಸ್ತಾವಿತ ಮರಳು ಗಣಿಗಾರಿಕೆ ಯೋಜನೆಯನ್ನು ಕೈಬಿಡುವಂತೆ ಆಗ್ರಹಿಸಿ ದಲಿತ ಸೇನೆ ವತಿಯಿಂದ ರಾಯಚೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ ಅವರಿಗೆ ಸಾರ್ವಜನಿಕ ಪರಿಸರ ಆಲಿಕೆ ಸಭೆಯ ವೇಳೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದಲಿತ ಸೇನೆಯ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ತಾಜುದ್ದೀನ್ ಚೀಕಲಪರ್ವಿ ಮಾತನಾಡಿ, ಪ್ರಸ್ತಾವಿತ ಮರಳು ಗಣಿಗಾರಿಕೆ ಯೋಜನೆಯಿಂದ ಪರಿಸರಕ್ಕೆ ಗಂಭೀರ ಹಾನಿಯಾಗುವ ಸಾಧ್ಯತೆ ಇದೆ. ನಿರಂತರವಾಗಿ ಭಾರೀ ವಾಹನಗಳ ಸಂಚಾರದಿಂದ ಧೂಳು ಹೆಚ್ಚಾಗಿ ವಾಯು ಮಾಲಿನ್ಯ ಉಂಟಾಗಲಿದ್ದು, ಇದರ ಪರಿಣಾಮವಾಗಿ




ಗ್ರಾಮಸ್ಥರು, ಮಕ್ಕಳು, ಹಿರಿಯ ನಾಗರಿಕರು ಹಾಗೂ ರೈತರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳಲಿದೆ. ಕೃಷಿ ಭೂಮಿಗಳ ಮೇಲೆ ಧೂಳು ಆವರಿಸಿ ಬೆಳೆಗಳಿಗೆ ಹಾನಿಯಾಗುವ ಜೊತೆಗೆ, ತುಂಗಭದ್ರಾ ನದಿಯ ಸ್ವಾಭಾವಿಕ ಪರಿಸರ ವ್ಯವಸ್ಥೆಗೂ ಧಕ್ಕೆ ಉಂಟಾಗುವ ಆತಂಕವಿದೆ ಎಂದು ಹೇಳಿದರು.

ನದಿಪಾತ್ರದಲ್ಲಿ ಅತಿಯಾದ ಮರಳು ಗಣಿಗಾರಿಕೆಯಿಂದ ಅಂತರ್ಜಲ ಮಟ್ಟ ಕುಸಿತ, ನದಿ ದಡಗಳ ಸವೆತ, ಕುಡಿಯುವ ನೀರಿನ ಸಮಸ್ಯೆ ಹಾಗೂ ಜೀವ ವೈವಿಧ್ಯಕ್ಕೆ ಹಾನಿಯಾಗುವ ಸಾಧ್ಯತೆಗಳಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಈ ಯೋಜನೆಗೆ ಯಾವುದೇ ಅನುಮತಿ ನೀಡಬಾರದು. ಪರಿಸರ ಮತ್ತು ಜನರ ಆರೋಗ್ಯಕ್ಕೆ ಮೊದಲ ಆದ್ಯತೆ ನೀಡಿ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಡುವಂತೆ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ದಲಿತ ಸೇನೆಯ ಪದಾಧಿಕಾ-ರಿಗಳು ಹಾಗೂ ಚೀಕಲಪರ್ವಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಉಪಸ್ಥಿತರಿದ್ದರು.

## ಬಡವರಿಗೆ ಪರ್ಯಾಯ ವ್ಯವಸ್ಥೆ ಮಾಡಿ ಶೆಡ್, ಗುಡಿಸಲು, ತೆರವುಗೊಳಿಸಿ: ಸುರೇಶ ಗೊಬ್ಬರಕಲ್

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಗೋರೇಬಾಳ ಕ್ಯಾಂಪಿನಿಂದ 36ನೇ ಕಾಲುವೆ ಮಧ್ಯಭಾಗದಿಂದ ಗಾಂಧಿನಗರದವರೆಗೂ ಸಂಪೂರ್ಣ ರಸ್ತೆಯ ಡಾಂಬರೀಕರಣ ಕಾಮಗಾ-ರಿಯು ಈಗಾಗಲೇ ನಡೆದಿದ್ದು, ಕಾಲುವೆ ದಡದ ಮೇಲೆ ಸುಮಾರು 40-50 ವರ್ಷಗಳಿಂದಲೂ ಕೂಡ ಬಡವರು ಶೆಡ್, ಗುಡಿಸಲು, ಹಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಕಾಮಗಾರಿಯ ನೆಪದಲ್ಲಿ ಶೆಡ್, ಗುಡಿಸಲು, ನಿರ್ಮಿಸಿಕೊಂಡು ಕೂಲಿ ನಾಲಿ ಮಾಡಿಕೊಂಡು ಬದುಕು ಕಟ್ಟಿಕೊಂಡಿರುವ ಬಡವರನ್ನು ಒಕ್ಕಲೆಬ್ಬಿಸಲು ಅಧಿಕಾ-ರಿಗಳು ಮುಂದಾಗಿದ್ದು, ಖಂಡನೀಯ ಎಂದು ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ದಿಂದ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಯಿತು.

ಕಾಲುವೆ ಮೇಲೆ ಹಾಕಿಕೊಂಡ ಶೆಡ್, ಗುಡಿಸಲುಗಳನ್ನು 3 ದಿನಗೊಳಗಾಗಿ ತೆರವುಗೊಳಿಸಿ ಇಲ್ಲವಾದಲ್ಲಿ ಜೆ.ಸಿ.ಬಿ ಯಂತ್ರದಿಂದ ತೆರವು ಗೊಳಿಸಬೇಕಾಗುತ್ತದೆ ಎಂದು ಸಂಬಂಧಪಟ್ಟ ಅಧಿಕಾ-ರಿಗಳು ಎಚ್ಚರಿಕೆ ನೀಡಿದ್ದಾರೆ. ತಾವು ಅಧಿಕಾರಿಗಳು



ಪಾಳೇಗಾರರಲ್ಲ ಜನರನ್ನ ಎದುರಿಸಲಿಕ್ಕೆ 3 ದಿನ ಗಡವು ಕೊಟ್ಟು ಯಂತ್ರಗಳಿಂದ ಈ ಕುಟುಂಬಗಳನ್ನು ಬೀದಿಗೆ ತಂದು ನಿಲ್ಲಿಸುವುದು ಸರಿಯಾದ ಕ್ರಮವಲ್ಲ! ಮೊದಲು ಈ ಕುಟುಂಬಗಳಿಗೆ ಪರ್ಯಾಯ ವಸತಿ ಕಲ್ಪಿಸುವುದು ಹಾಗೂ ಈ ಕುಟುಂಬದವರ ಸಭೆ ಕರೆದು ಚರ್ಚಿಸುವ ಕೆಲಸವಾಗಬೇಕು. ಅದಾವುದು ಮಾಡದೇ ಏಕಾಏಕಿ 3 ದಿನದೊಳಗಾಗಿ ಖಾಲಿ ಮಾಡದಿದ್ದರೆ, ಜೆಸಿಬಿ ಮೂಲಕ ಕಿತ್ತಿಸಲಾಗುತ್ತಿದೆ ಎಂದು ನೋಟಿಸ್ ಜಾರಿ ಮಾಡಿರುವುದು ಎಷ್ಟು ಸರಿ? ಇಲ್ಲಿ ವಾಸವಾಗಿದ್ದು ಆರ್ಥಿಕವಾಗಿ ಹಿಂದುಳಿದ ವಿವಿಧ ಕೋಮಿನ ಜನರು, ಇವರಿಗೆ ವಾಸ ಮಾಡಲು ಸ್ಥಳವಿಲ್ಲ. ಅಂತೆಯೇ 40-50 ವರ್ಷಗಳಿಂದ ಈ ಕುಟುಂಬದವರು ಶೆಡ್, ಗುಡಿಸಲು ಹಾಕಿಕೊಂಡು ವಾಸವಾಗಿದ್ದಾರೆ. ಮೊದಲು ಇವರಿಗೆ ಪುನರವಸತಿ ಕಲ್ಪಿಸಿ, ನಂತರ ತೆರವುಗೊಳಿಸಿ,

ಈಗಾಗಲೇ ಇಲ್ಲಿ ಶೆಡ್, ಗುಡಿಸಲು ಹಾಕಿಕೊಂಡು ವಾಸವಿದ್ದವರಿಗೆ ಗ್ರಾ.ಪಂ.ಯಿಂದ ವಿದ್ಯುತ್, ಕುಡಿವ ನೀರು, ಸರ್ಕಾರದ ಯೋಜನೆ ಮನೆಗೊಂದರಂತೆ ಶೌಚಾಲಯ ಸಹಿತ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಜೊತೆಗೆ ತೆರಿಗೆ ಪಾವತಿಸುತ್ತಿದ್ದರು ಅನಧಿಕೃತ ಎಂದು ಹೇಗೆ ಹೇಳುತ್ತೀರಿ ಎಂದು ಪ್ರಶ್ನಿಸಿ, ಕೊಟ್ಟ ನೋಟಿಸ್ ನಲ್ಲಿ ಅನಧಿಕೃತವೆಂದು ನಮೂದಿಸಿದ್ದು, ವಿಚಾರಣೆ ಮಾಡದೆ, ಪರಿಶೀಲಸದೆ ಅನಧಿಕೃತ ಜಾಗ ಅಕ್ರಮಸಿ ಕೊಂಡಿದ್ದೀರಿ ಎನ್ನುವುದು ನಿಯಮಗಳ ಉಲ್ಲಂಘನೆ ಮಾಡಿದಂತಾಗುತ್ತದೆ ಎಂದರು.

ಈಗ ತೆಗೆದುಕೊಂಡಿರುವ ಡಾಂಬರೀಕರಣದ ಕಾಮಗಾರಿ ಗೋರೇಬಾಳ ಕ್ಯಾಂಪಿನಿಂದ ಪೆಟ್ರೋಲ್ ಬಂಕ್ ನವರೆಗೆ ತೆಗೆದುಕೊಂಡಿದ್ದು, ಇದೇ ಅಳತೆಯಲ್ಲಿ ಮುಂದುವರೆಸಿಕೊಂಡು ಹೋದಲ್ಲಿ ತೆರವು ಗೊಳಿಸುವ ಅಗತ್ಯವಿಲ್ಲ. ಯಾವುದೇ ಕಾರಣಕ್ಕೂ ಇಲ್ಲಿನ ಬಡವರು ತೆರವು ಗೊಳಿಸಲು ಸಿದ್ಧರಿಲ್ಲ, ಜೈಲಿಗೆ ಹೋಗಲು ಸಿದ್ದರಾಗಿದ್ದಾರೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ಮತ್ತು ಇಲ್ಲಿ ವಾಸವಾಗಿರುವ ಸಾರ್ವಜನಿಕರ ಸಹಯೋಗದಲ್ಲಿ ಗಾಂಧಿನಗರದ, ಗಾಂಧಿವೃತದಲ್ಲಿ ಬೆಳಿಗ್ಗೆ 11 ಗಂಟೆಗೆ ರಸ್ತಾ ರೋಕಾ ಮತ್ತು ಧರಣಿ ಸತ್ಯಾಗ್ರಹ ಆಯೋಜಿಸಿಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬಡವರ ಅಹವಾಲು ಕೇಳುವುದರ ಜೊತೆಗೆ ಮನವಿ ಪತ್ರ ಸ್ವೀಕರಿಸಿ ಎಂದು ಪ್ರತಿಭಟನಾ ನಿರತರಾಗಿದ್ದಾರೆ.

ಈ ಸಂದರ್ಭದಲ್ಲಿ: ಉಪಾಧ್ಯಕ್ಷ ಹನುಮೇಶ ತಿಪ್ಪನಹಟ್ಟಿ, ನಗರ ಘಟಕದ ಅಧ್ಯಕ್ಷ ಆಂಜನೇಯ ದೇಸಾಯಿ, ತಾಲೂಕು ಅಧ್ಯಕ್ಷ ಸುರೇಶ ಗೊಬ್ಬರಕಲ್, ಸಂಚಾಲಕ ಮಹಿಬೂಬಸಾಬ್, ಸೇರಿದಂತೆ ವಾಸ ಮಾಡುವ ಕೂಲಿಕಾರರು, ಬಡವರು, ಪ್ರತಿಭಟನೆಯಲ್ಲಿ ನಿರತರಾಗಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101